रेलवे भर्ती बोर्ड / RAILWAY RECRUITMENT BOARDS

सीईएन - 07/2025 - एनटीपीसी पूर्व-स्नातक स्तर - CEN - 07/2025 - NTPC UNDER GRADUATE LEVEL

# RRB NTPC Undergraduate 2025

## Undergraduate Level · CEN 07/2025 · CBT-2 · Question Paper

**Kannada**

Complete Paper · 120 Questions · Official Answer Key

## About this Compilation

This booklet contains the complete question paper of the **RRB NTPC Undergraduate 2025 CBT-2** examination in **Kannada**, with the correct option marked as per the official answer key.

✓ Correct option (highlighted green)

### How to use

- Use the **Index** page to jump directly to any set (clickable).
- Questions appear section by section in the order of the paper, numbered 1 onward.
- Diagram and wide-table questions appear at full width at the end of their section.
- The correct answer is highlighted in green with a tick.

### More from QMaths

Check your marks, normalized score and zone-wise rank free at **rank.qmaths.in**. Master English vocabulary with the **Blackbook** app.





***Toppers' Choice, Blackbook of English Vocabulary, Now available in App format : DOWNLOAD NOW***

# Index — All Sets (click to open)

Set 1 — 17 Sep 2026
9:30 AM - 11:00 AM

## General Awareness

50 Questions • Answer Key

**Q1** General Awareness

ಗ್ಯಾಲಪ್ ಮತ್ತು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲದ (UN SDSN) ಸಹಭಾಗಿತ್ವದಲ್ಲಿ ವಿಶ್ವ ಸಂತೃಪ್ತಿ ವರದಿ 2026 ಅನ್ನು ಯಾವ ಸಂಸ್ಥೆಯು ಪ್ರಕಟಿಸಿದೆ?

A. ವಿಶ್ವ ಬ್ಯಾಂಕ್

B. ವೆಲ್ ಬೀಯಿಂಗ್ ರಿಸರ್ಚ್ ಸೆಂಟರ್, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ✔

C. ವಿಶ್ವ ಆರ್ಥಿಕ ವೇದಿಕೆ

D. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ

**Q2** General Awareness

2026 ರ ನವೀಕರಿಸಬಹುದಾದ ಇಂಧನ ಅಂಕಿಅಂಶಗಳ ಪ್ರಕಾರ, ನವೀಕರಿಸಬಹುದಾದ ಇಂಧನ ಶಕ್ತಿಯ ಸ್ಥಾಪಿತ ಸಾಮರ್ಥ್ಯದಲ್ಲಿ ಭಾರತದ ಜಾಗತಿಕ ಶ್ರೇಯಾಂಕ ಎಷ್ಟು?

A. ಮೂರನೇ ✔

B. ಎರಡನೇ

C. ಐದನೇ

D. ನಾಲ್ಕನೇ

**Q3** General Awareness

ಈ ಕೆಳಗಿನವುಗಳಲ್ಲಿ ಯಾವುದು ದಕ್ಷಿಣ, ಆಗ್ನೇಯ ಮತ್ತು ಪೂರ್ವ ಏಷ್ಯಾದ ಮಾನ್ಸೂನ್ ಪ್ರದೇಶಗಳಲ್ಲಿ ಅನುಸರಿಸಲಾಗುವ ಅಧಿಕೋತ್ಪಾದನೆಯ ಜೀವನೋಪಾಯ ಕೃಷಿಯ ಗುಣಲಕ್ಷಣವನ್ನು ಸರಿಯಾಗಿ ಗುರುತಿಸುತ್ತದೆ?

A. ತೀವ್ರ ದುಡಿಮೆ ಮತ್ತು ಬಹು ಬೆಳೆಗಳನ್ನು ಹೊಂದಿರುವ ಸಣ್ಣ ತೋಟಗಳು ✔

B. ವ್ಯಾಪಕ ಮೇಯಿಸುವಿಕೆ ಮತ್ತು ಯಾಂತ್ರೀಕರಣ ಹೊಂದಿರುವ ದೊಡ್ಡ ತೋಟಗಳು

C. ಸ್ಥಳಾಂತರ ಕೃಷಿ ಮತ್ತು ದೀರ್ಘಾವಧಿಗೆ ಪಾಳು ಬೀಳುವ ವಿರಳವಾದ ತೋಟಗಳು

D. ರಫ್ತು ಬೆಳೆಗಳು ಮತ್ತು ಕೂಲಿ ಕಾರ್ಮಿಕರೊಂದಿಗೆ ವಿಶಾಲ ತೋಟಗಳು

**Q4** General Awareness

2024 – 25 ರಲ್ಲಿ, ಶಿಕ್ಷಣ ಸಚಿವಾಲಯವು ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಕಾರ್ಯಕ್ರಮದ ಮೂಲಕ ಶಾಲಾ ಶಿಕ್ಷಣದಲ್ಲಿ ಸೈಬರ್ ಸುರಕ್ಷತೆ ಮತ್ತು ಡಿಜಿಟಲ್ ಯೋಗಕ್ಷೇಮದ ಏಕೀಕರಣವನ್ನು ಪುನರುಚ್ಚರಿಸಿದೆ. ಯಾವ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ಶಾಲೆಗೆ ಆರೋಗ್ಯ ಮತ್ತು ಯೋಗಕ್ಷೇಮ ರಾಯಭಾರಿಗಳಾಗಿ ತರಬೇತಿ ಪಡೆದ ಇಬ್ಬರು ಶಿಕ್ಷಕರು ಸೈಬರ್ ಸುರಕ್ಷತೆ ಸೇರಿದಂತೆ ವಿವಿಧ ವಿಷಯಗಳ ಮೇಲೆ ಸಾಪ್ತಾಹಿಕ ಸೆಶನ್ ಗಳನ್ನು ನಡೆಸುತ್ತಾರೆ?

A. CBSE ಸೈಬರ್ ಸುರಕ್ಷತೆ ಕೈಪಿಡಿ

B. ಡಿಜಿಟಲ್ ಶಿಕ್ಷಣಕ್ಕಾಗಿ PRAGYATA ಮಾರ್ಗಸೂಚಿಗಳು

C. ಸುರಕ್ಷಿತ ಆನ್ಲೈನ್ ಕಲಿಕೆ ಕುರಿತು NCERT ಕೈಪಿಡಿ

D. ಶಾಲಾ ಆರೋಗ್ಯ ಮತ್ತು ಯೋಗಕ್ಷೇಮ ಕಾರ್ಯಕ್ರಮ (SHWP) ✔

**Q5** General Awareness

ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಗೆ ಈ ಕೆಳಗಿನ ಯಾವ ಕಚ್ಚಾ ವಸ್ತುಗಳ ಜೋಡಿಯು ಅತ್ಯಂತ ಅವಶ್ಯಕವಾಗಿದೆ?

A. ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್

B. ತಾಮ್ರದ ಅದಿರು ಮತ್ತು ಜಿಪ್ಸಂ

C. ಬಾಕ್ಸೈಟ್ ಮತ್ತು ಜಿಪ್ಸಂ

D. ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲು ✔

**Q6** General Awareness

ಯಾವ ಘಟನೆಯು ಭಾರತೀಯ ರಾಜಕೀಯದಲ್ಲಿ ತೀವ್ರಗಾಮಿಗಳ ಉದಯಕ್ಕೆ ತಕ್ಷಣದ ಪ್ರಚೋದನೆಯನ್ನು ನೀಡಿತು?

A. ಮೊದಲ ಮಹಾಯುದ್ಧ

B. ಇಲ್ಬರ್ಟ್ ಮಸೂದೆ ವಿವಾದ

C. ಬಂಗಾಳದ ವಿಭಜನೆ ✔

D. ಮಾರ್ಲೆ – ಮಿಂಟೋ ಸುಧಾರಣೆಗಳು

**Q7** General Awareness

UPSC ಅಧ್ಯಕ್ಷರು ಅಥವಾ ಸದಸ್ಯರನ್ನು ಹುದ್ದೆಯಿಂದ ತೆಗೆದುಹಾಕಲು ಕೆಳಗಿನವುಗಳಲ್ಲಿ ಯಾವುದು ಆಧಾರ **ಅಲ್ಲ**?

A. ದಿವಾಳಿತನ

B. ವಿದೇಶಿ ಪ್ರಶಸ್ತಿಯನ್ನು ಸ್ವೀಕರಿಸುವುದು ✔

C. ಮನಸ್ಸು ಅಥವಾ ದೇಹದ ದುರ್ಬಲತೆ

D. ಅಧಿಕೃತ ಕರ್ತವ್ಯಗಳ ಹೊರಗೆ ಸಂಬಳ ಪಡೆಯುವ ಉದ್ಯೋಗ

Blackbook Vocabulary — Now in the App! ▶ Download Now on Google Play

generated by rank.qmaths.in

**Q8** General Awareness

ಶೇರ್ ಶಾ ಸೂರಿಯ ಆಡಳಿತದಲ್ಲಿ ಅಭಿವೃದ್ಧಿಗೊಂಡ ರಸ್ತೆ ಜಾಲದ ಆಡಳಿತಾತ್ಮಕ ಮಹತ್ವವನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಕೋಸ್ ಮಿನಾರ್ (Kos minars) ಗಳು ಕೊರಿಯರ್ ಗಳನ್ನು ಹೊಂದಿದ್ದವು ಮತ್ತು ಕಂದಾಯ ಕಚೇರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದವು

B. ಸರಯೊ (Sarai) ಗಳು ವಸತಿ ಒದಗಿಸುತ್ತಿದ್ದವು ಮತ್ತು ಡಾಕ್ (dak) ಚೌಕಿಯಾಗಿ ಕಾರ್ಯನಿರ್ವಹಿಸುತ್ತಿದ್ದವು ✓

C. ಡಾಕ್ (dak) ಚೌಕಿಗಳು ಧಾನ್ಯವನ್ನು ಸಂಗ್ರಹಿಸುತ್ತಿದ್ದವು ಮತ್ತು ಮಾರುಕಟ್ಟೆ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು

D. ಸರಯೊ (Sarai) ಗಳು ತೆರಿಗೆಗಳನ್ನು ಸಂಗ್ರಹಿಸುತ್ತಿದ್ದವು ಮತ್ತು ಮಿಲಿಟರಿ ದಂಡು ಪ್ರದೇಶಗಳಾಗಿ ಕಾರ್ಯನಿರ್ವಹಿಸುತ್ತಿದ್ದವು

**Q9** General Awareness

ಸಂವಿಧಾನದ ಯಾವ ತಿದ್ದುಪಡಿ ಕಾಯ್ದೆಯು ಭಾರತದಲ್ಲಿ ಪುರಸಭೆಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡಿತು?

A. 61ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ, 1989

B. 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ, 1992

C. 74ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ, 1992 ✓

D. 86ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ, 2002

**Q10** General Awareness

ಯಾವ ವೈದಿಕ ಸಭೆಯು ಮುಖ್ಯವಾಗಿ ಹಿರಿಯರು ಮತ್ತು ಗಣ್ಯರನ್ನು ಒಳಗೊಂಡಿತ್ತು?

A. ಸಭಾ ✓

B. ಸಮಿತಿ

C. ವಿದಾತಾ

D. ಗಣ

**Q11** General Awareness

ಯಾವ ಸಾಂವಿಧಾನಿಕ ತಿದ್ದುಪಡಿಯು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗೆ ಮತದಾನದ ವಯಸ್ಸನ್ನು ಕಡಿಮೆ ಮಾಡಿತು?

A. 61 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ ✓

B. 44 ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ

C. 52 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ

D. 74 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ

**Q12** General Awareness

The ICC Champions Trophy is organized in what cyclical format? .

A. Every 2 years

B. Every 4 years ✓

C. Every 5 years

D. Every 6 years

**Q13** General Awareness

ಭಾರತದ ರಾಷ್ಟ್ರೀಯ ಬಹುಆಯಾಮದ ಬಡತನ ಸೂಚ್ಯಂಕಕ್ಕೆ (MPI) ಅಲ್ಕೈರ್-ಫೋಸ್ಟರ್ ವಿಧಾನದ ಡ್ಯುವಲ್-ಕಟ್‌ಆಫ್ (dual-cutoff) ವಿಧಾನವನ್ನು ಏಕೆ ಆಯ್ಕೆ ಮಾಡಲಾಯಿತು?

A. ಇದು ಬಹುಆಯಾಮದ ಬಡತನದ ಗ್ರಾಮೀಣ ಆಯಾಮಗಳಿಗೆ ಮಾತ್ರ ಒತ್ತು ನೀಡುತ್ತದೆ

B. ಇದು ಜಾಗತಿಕ ತುಲನಾತ್ಮಕತೆಯನ್ನು ಭಾರತದ ಅಭಿವೃದ್ಧಿ ಆದ್ಯತೆಗಳೊಂದಿಗೆ ಸಂಯೋಜಿಸುತ್ತದೆ ✓

C. ಇದು ಎಲ್ಲಾ ಸೂಚಕಗಳಿಗೆ ಒಂದು ಸಾಮಾನ್ಯ ಅಭಾವದ ಮಿತಿಯನ್ನು ಬಳಸುತ್ತದೆ

D. ಇದು ಕೇವಲ ಆದಾಯ-ಆಧಾರಿತ ಕೌಟುಂಬಿಕ ಅಭಾವದ ರೂಪಗಳನ್ನು ಅಳೆಯುತ್ತದೆ

**Q14** General Awareness

ಸಿಂಧೂ ಕಣಿವೆ ನಾಗರಿಕತೆಯ ಯೋಜಿತ ನಗರ ವಿನ್ಯಾಸವನ್ನು ಯಾವ ವೈಶಿಷ್ಟ್ಯವು ಅತ್ಯುತ್ತಮವಾಗಿ ವಿವರಿಸುತ್ತದೆ?

A. ದೊಡ್ಡ ದೇವಾಲಯಗಳ ಸಂಕೀರ್ಣಗಳ ಸುತ್ತಲಿನ ಕಟ್ಟಡಗಳು

B. ಲಂಬ ಕೋನಗಳಲ್ಲಿ ಸಂಧಿಸುವ ಬೀದಿಗಳು ✓

C. ವೃತ್ತಾಕಾರದ ಕೇಂದ್ರಗಳ ಸುತ್ತಲಿನ ವಾಸಸ್ಥಾನಗಳು

D. ಅನಿಯಮಿತ ಅಂಕುಡೊಂಕಾದ ಮಾರ್ಗಗಳ ಪಕ್ಕದಲ್ಲಿ ನಿರ್ಮಿಸಲಾದ ಮನೆಗಳು

**Q15** General Awareness

ಸಂಸ್ಥೆಯು ಒಂದೇ ಕಚೇರಿಯ ಕಟ್ಟಡದೊಳಗೆ ಕಂಪ್ಯೂಟರ್ ಗಳನ್ನು ಸಂಪರ್ಕಿಸಿ ಖಾಸಗಿ ನಿರ್ವಹಣೆಯ ಜಾಲದ ಮೂಲಕ ಫೈಲ್ ಗಳು, ಪ್ರಿಂಟರುಗಳು ಮತ್ತು ಇತರ ಸಂಪನ್ಮೂಲಗಳನ್ನು ಹಂಚಿಕೊಳ್ಳುತ್ತದೆ. ಹಾಗಾದರೆ ಈ ವ್ಯವಸ್ಥೆಗೆ ಯಾವ ವಿಧದ ಜಾಲವು ಹೆಚ್ಚು ಸೂಕ್ತವಾಗಿದೆ?

A. ವೈಡ್ ಏರಿಯಾ ನೆಟ್ವರ್ಕ್ (WAN)

B. ಪರ್ಸನಲ್ ಏರಿಯಾ ನೆಟ್ವರ್ಕ್ (PAN)

C. ಲೋಕಲ್ ಏರಿಯಾ ನೆಟ್ವರ್ಕ್ (LAN) ✓

D. ಮೆಟ್ರೋಪಾಲಿಟನ್ ಏರಿಯಾ ನೆಟ್ವರ್ಕ್ (MAN)

Blackbook Vocabulary — Now in the App! ▶ Download Now on Google Play

**Q16** General Awareness

2026 ರಲ್ಲಿ ಸರ್ಕಾರವು ಪ್ರಾರಂಭಿಸಿದ ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮದ (SSBSK) ಮುಖ್ಯ ಉದ್ದೇಶವೇನು?

A. ತಾಯಂದಿರ ಆರೋಗ್ಯಕ್ಕೆ ಸಹಾಯಧನಗಳನ್ನು ನೀಡುವುದು

B. ಮಕ್ಕಳಿಗೆ ಉಚಿತ ಶಿಕ್ಷಣವನ್ನು ಒದಗಿಸುವುದು

C. ಹದಿಹರೆಯದವರಿಗೆ ಪೌಷ್ಟಿಕಾಂಶವನ್ನು ವಿತರಿಸುವುದು

D. ಹುಟ್ಟಿನಿಂದ 36 ತಿಂಗಳವರೆಗೆ ಏಕೀಕೃತ ಮಕ್ಕಳ ಆರೋಗ್ಯ ಸೇವೆಯನ್ನು ಒದಗಿಸುವುದು ✓

**Q17** General Awareness

ನವೆಂಬರ್ 2025 ರಲ್ಲಿ ಜಾರಿಗೆ ಬಂದ ಹೊಸ ಕಾರ್ಮಿಕ ಸಂಹಿತೆಗಳು ಮಹಿಳಾ ಸುರಕ್ಷತೆಗೆ ಸಂಬಂಧಿಸಿದ ಯಾವ ಮಹತ್ವದ ಬದಲಾವಣೆಯನ್ನು ತಂದವು?

A. ಮಹಿಳೆಯರಿಗೆ ಕೈಗಾರಿಕಾ ಉದ್ಯೋಗದಿಂದ ನಿಷೇಧಿಸಲಾಗಿದೆ

B. ಸುರಕ್ಷತಾ ಕ್ರಮಗಳೊಂದಿಗೆ ರಾತ್ರಿ ಪಾಳಿಗೆ ಅನುಮತಿ ✓

C. ಮಹಿಳೆಯರಿಗೆ ಹೆರಿಗೆ ಸೌಲಭ್ಯಗಳಿಂದ ವಿನಾಯಿತಿ ನೀಡಲಾಗಿದೆ

D. ಮಹಿಳೆಯರು ಬೇಗನೆ ನಿವೃತ್ತರಾಗುವ ಅವಶ್ಯಕತೆಯಿದೆ

**Q18** General Awareness

ಯಾವ ಯುರೋಪಿಯನ್ ವ್ಯಾಪಾರ ಕಂಪನಿಯು ಮುಖ್ಯವಾಗಿ ವಾಣಿಜ್ಯ ಚಟುವಟಿಕೆಗಳಲ್ಲಿ ಪ್ರಾಬಲ್ಯ ಸಾಧಿಸುವುದರ ಮೇಲೆ (ವಿಶೇಷವಾಗಿ ಮಸಾಲೆ ಪದಾರ್ಥಗಳ ವ್ಯಾಪಾರದಲ್ಲಿ) ಕೇಂದ್ರೀಕರಿಸಿತು ಮತ್ತು ಮಲಬಾರ್ ಪ್ರದೇಶದಲ್ಲಿ ತನ್ನ ಅತ್ಯಂತ ಗಮನಾರ್ಹ ಅಸ್ತಿತ್ವವನ್ನು ಹೊಂದಿತ್ತು?

A. ಡ್ಯಾನಿಶ್ ಈಸ್ಟ್ ಇಂಡಿಯಾ ಕಂಪನಿ

B. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ

C. ಡಚ್ ಈಸ್ಟ್ ಇಂಡಿಯಾ ಕಂಪನಿ ✓

D. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ

**Q19** General Awareness

ಗೃಹೋಪಯೋಗಿ ವಿದ್ಯುತ್ ಉಪಕರಣಗಳನ್ನು ಸರಣಿಯ ಬದಲಿಗೆ ಸಮಾಂತರವಾಗಿ ಏಕೆ ಸಂಪರ್ಕಿಸಲಾಗುತ್ತದೆ ಎಂಬುದನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಸಮಾಂತರ ವಿದ್ಯುನ್ಮಂಡಲಗಳು ಪೂರೈಕೆ ವೋಲ್ಟೇಜ್ ಅನ್ನು ಕಡಿಮೆ ಮಾಡುತ್ತವೆ

B. ವಿದ್ಯುತ್ ಪ್ರವಾಹವು ಒಮ್ಮೆಗೆ ಒಂದು ಉಪಕರಣದ ಮೂಲಕ ಮಾತ್ರವೇ ಹರಿಯುತ್ತದೆ

C. ಪ್ರತಿ ಉಪಕರಣವು ಸಂಪೂರ್ಣ ಪೂರೈಕೆ ವೋಲ್ಟೇಜ್ ಅನ್ನು ಸ್ವೀಕರಿಸುತ್ತದೆ ಮತ್ತು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ ✓

D. ಸಮಾಂತರ ವಿದ್ಯುನ್ಮಂಡಲಗಳು ಪ್ರತಿ ಉಪಕರಣದ ರೋಧವನ್ನು ಹೆಚ್ಚಿಸುತ್ತವೆ

**Q20** General Awareness

ಭಾರತದ ಪಶ್ಚಿಮ ಕರಾವಳಿಯ ಬಯಲು ಪ್ರದೇಶಗಳು ವ್ಯಾಪಕವಾದ ನದೀಮುಖಜ ಭೂಮಿಯ ಬದಲಿಗೆ ಅನೇಕ ನದೀ ಮುಖಜ ಭೂಮಿಗಳನ್ನು ಯಾಕೆ ಹೊಂದಿವೆ ಎಂಬುದನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ನದಿಗಳು ಕಡಿಮೆ ಉದ್ದವನ್ನು ಹೊಂದಿದ್ದು, ಕಡಿದಾಗಿವೆ ಹಾಗೂ ವೇಗವಾಗಿ ಹರಿಯುತ್ತವೆ ✓

B. ನದಿಗಳು ಮಡ್ಡಿಯ ಸಾಕಷ್ಟು ನಿಕ್ಷೇಪವನ್ನು ಕೊಂಡೊಯ್ಯುತ್ತವೆ

C. ನದಿಗಳು ವಿಶಾಲವಾದ ಪ್ರವಾಹ ಮೈದಾನಗಳಲ್ಲಿ ಹರಿಯುತ್ತವೆ

D. ನದಿಗಳು ಹೆಚ್ಚು ಉದ್ದವನ್ನು ಹೊಂದಿದ್ದು, ನಿಧಾನವಾಗಿ ಮತ್ತು ಅಂಕುಡೊಂಕಾಗಿ ಹರಿಯುತ್ತವೆ

**Q21** General Awareness

ಜಾರ್ಖಂಡ್ ನ ಸಿಂಗಭುಮ್ ಜಿಲ್ಲೆಯ ಗುವಾ ಮತ್ತು ನೊಮುಂಡಿಯಲ್ಲಿ ಮುಖ್ಯವಾಗಿ ಯಾವ ಖನಿಜದ ಗಣಿಗಾರಿಕೆ ಮಾಡಲಾಗುತ್ತದೆ?

A. ಹೆಮಟೈಟ್ ಕಬ್ಬಿಣದ ಅದಿರು ✓

B. ಅಭ್ರಕದ ಅದಿರು

C. ಮ್ಯಾಂಗನೀಸ್ ಅದಿರು

D. ಬಾಕ್ಸೈಟ್ ಅದಿರು

**Q22** General Awareness

ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಈ ಕೆಳಗಿನ ಯಾವ ಆಯೋಗವನ್ನು 1983 ರಲ್ಲಿ ನೇಮಿಸಿತು ಮತ್ತು ರಾಜ್ಯಪಾಲರ ನೇಮಕಾತಿಯು ಕಟ್ಟುನಿಟ್ಟಾಗಿ ಪಕ್ಷಪಾತರಹಿತವಾಗಿರಬೇಕು ಎಂದು ಇದು ಶಿಫಾರಸು ಮಾಡಿತು?

A. ರಾಜಮನ್ನಾರ್ ಆಯೋಗ

B. ಸರ್ಕಾರಿಯಾ ಆಯೋಗ ✓

C. ಕೊಠಾರಿ ಆಯೋಗ

D. ಮಂಡಲ ಆಯೋಗ

**Q23** General Awareness

ಜಲಜನಕ ಮತ್ತು ಆಮ್ಲಜನಕವು ಒಗ್ಗೂಡಿ ನೀರನ್ನು ರೂಪಿಸುತ್ತವೆ. ನೀರು ಯಾವಾಗಲೂ ದ್ರವ್ಯರಾಶಿಯ ಸ್ಥಿರ ಅನುಪಾತದಲ್ಲಿ ಜಲಜನಕ ಮತ್ತು ಆಮ್ಲಜನಕವನ್ನು ಹೊಂದಿರುತ್ತದೆ ಎಂದು ಯಾವ ನಿಯಮವು ಹೇಳುತ್ತದೆ?

A. ಅವಗಾಡ್ರೋ ಅವರ ನಿಯಮ

B. ಸ್ಥಿರ ಅನುಪಾತಗಳ ನಿಯಮ ✓

C. ಬಾಯ್ಲ್ ಅವರ ನಿಯಮ

D. ಬಹು ಅನುಪಾತಗಳ ನಿಯಮ

Blackbook Vocabulary — Now in the App! ▶ Download Now on Google Play

**Q24** General Awareness

ವಿಂಬಲ್ಡನ್ ಟೆನಿಸ್ ಪಂದ್ಯಾವಳಿಯಲ್ಲಿ ಮಹಿಳೆಯರ ಸಿಂಗಲ್ಸ್ ವಿಭಾಗದ ವಿಜೇತರಿಗೆ ಯಾವ ಟ್ರೋಫಿಯನ್ನು ನೀಡಲಾಗುತ್ತದೆ?

- A. ಡೇವಿಸ್ ಕಪ್
- B. ರೈಡರ್ ಕಪ್
- C. ವೀನಸ್ ರೋಸ್ವಾಟರ್ ಡಿಶ್ ✓
- D. ಆಶಸ್ ಟ್ರೋಫಿ

**Q25** General Awareness

1855 – 56 ರಲ್ಲಿ ಯಾವ ಬುಡಕಟ್ಟು ದಂಗೆಯ ನೇತೃತ್ವವನ್ನು ಸಿದ್ಧು ಮತ್ತು ಕಾನ್ಹು ಅವರು ವಹಿಸಿದ್ದರು?

- A. ಕೋಲ್ ದಂಗೆ
- B. ರಾಮೋಸಿ ದಂಗೆ
- C. ಭಿಲ್ ದಂಗೆ
- D. ಸಂಥಾಲ್ ದಂಗೆ ✓

**Q26** General Awareness

ಭಾರತದಲ್ಲಿ ಅಗ್ರ ಪರಭಕ್ಷಕವನ್ನು ರಕ್ಷಿಸಲು, ಈ ಕೆಳಗಿನ ಯಾವ ವನ್ಯಜೀವಿ ಸಂರಕ್ಷಣಾ ಉಪಕ್ರಮವನ್ನು 1973 ರಲ್ಲಿ ಪ್ರಾರಂಭಿಸಲಾಯಿತು?

- A. ಹುಲಿ ಯೋಜನೆ ✓
- B. ಆನೆ ಯೋಜನೆ
- C. ಮೊಸಳೆ ಯೋಜನೆ
- D. ಹಿಮ ಚಿರತೆ ಯೋಜನೆ

**Q27** General Awareness

ಪರಿಶಿಷ್ಟ ಪಂಗಡಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಕಾರ್ಯತಂತ್ರವಾಗಿ ರೂಪಿಸಲಾದ ಬುಡಕಟ್ಟು ಉಪ-ಯೋಜನೆಯು (TSP) ಮುಖ್ಯವಾಗಿ ಈ ಕೆಳಗಿನ ಯಾವ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತದೆ?

- A. ನಗರ ಮೂಲಸೌಕರ್ಯಗಳನ್ನು ಬಲಪಡಿಸುವುದು ಮತ್ತು ಗುರುತಿಸಲಾದ ಬುಡಕಟ್ಟು ನೆಲೆಗಳಲ್ಲಿ ಪುರಸಭೆಯ ಸೇವೆಗಳನ್ನು ವಿಸ್ತರಿಸುವುದು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ವೃದ್ಧಿಸುವುದು
- B. ಕೈಗಾರಿಕಾ ಬೆಳವಣಿಗೆಯನ್ನು ಸುಧಾರಿಸುವುದು ಮತ್ತು ಅಧಿಸೂಚಿತ ಬುಡಕಟ್ಟು ಪ್ರದೇಶಗಳಲ್ಲಿ ಸಾರಿಗೆ ಮೂಲಸೌಕರ್ಯವನ್ನು ವಿಸ್ತರಿಸುವುದು
- C. ಪರಿಶಿಷ್ಟ ಪಂಗಡಗಳು ಮತ್ತು ಉಳಿದ ಜನಸಂಖ್ಯೆಯ ನಡುವಿನ ಅಭಿವೃದ್ಧಿಯಲ್ಲಿ ಇರುವ ಅಂತರವನ್ನು ಅಂತರ್ಗತ ಅಭಿವೃದ್ಧಿಯ ಮೂಲಕ ಸರಿಹೊಂದಿಸುವುದು ✓
- D. ಬುಡಕಟ್ಟು ಪ್ರಾಬಲ್ಯದ ಪ್ರದೇಶಗಳಲ್ಲಿ ಖಾಸಗಿ ಹೂಡಿಕೆಯನ್ನು ಉತ್ತೇಜಿಸುವುದು ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಹೆಚ್ಚಿಸುವುದು

**Q28** General Awareness

The eight upright columns of squares on a chessboard are called ‘files’, so the eight lateral rows of squares are called:

- A. Castlings
- B. Diagonals
- C. Clocks
- D. Ranks ✓

**Q29** General Awareness

ಸಂಗಮ್ ಸಾಹಿತ್ಯದಲ್ಲಿ, ಈ ಕೆಳಗಿನ ಯಾವ ವಿಷಯವು ಮುಖ್ಯವಾಗಿ 'ಪುರಂ' ಪರಿಕಲ್ಪನೆಗೆ ಸಂಬಂಧಿಸಿದೆ?

- A. ಯುದ್ಧ, ಶೌರ್ಯ, ಮತ್ತು ಸಾರ್ವಜನಿಕ ಜೀವನ ✓
- B. ಪ್ರೀತಿ ಮತ್ತು ವೈಯಕ್ತಿಕ ಭಾವನೆಗಳು
- C. ಧಾರ್ಮಿಕ ಆಚರಣೆಗಳು ಮತ್ತು ಯಜ್ಞಗಳು
- D. ವ್ಯಾಪಾರ ಮತ್ತು ವಾಣಿಜ್ಯ

**Q30** General Awareness

ಭಾರತದ ಸಂವಿಧಾನದ ಯಾವ ಅನುಚ್ಛೇದವು, ಒಬ್ಬ ವ್ಯಕ್ತಿಗೆ ಒಂದೇ ಅಪರಾಧಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಶಿಕ್ಷೆಯಾಗದಂತೆ ರಕ್ಷಿಸುತ್ತದೆ?

- A. ಅನುಚ್ಛೇದ 19
- B. ಅನುಚ್ಛೇದ 21
- C. ಅನುಚ್ಛೇದ 18
- D. ಅನುಚ್ಛೇದ 20 ✓

**Q31** General Awareness

ಪೌರತ್ವ ಕಾಯ್ದೆ 1995ರ ಅಡಿಯಲ್ಲಿ ಒಬ್ಬ ವ್ಯಕ್ತಿಯ ಭಾರತೀಯ ಪೌರತ್ವವನ್ನು ರದ್ದುಪಡಿಸಲು ಅಥವಾ ಕಿತ್ತುಕೊಳ್ಳುವ ಅಧಿಕಾರವು ಈ ಕೆಳಗಿನ ಆಯ್ಕೆಗಳ ಪೈಕಿ ಯಾರಿಗಿದೆ?

- A. ಸಂಸತ್ತು
- B. ಭಾರತದ ರಾಷ್ಟ್ರಪತಿ ಮತ್ತು ಸಚಿವ ಸಂಪುಟ
- C. ಭಾರತದ ಸರ್ವೋಚ್ಚ ನ್ಯಾಯಾಲಯ
- D. ಗೃಹ ವ್ಯವಹಾರಗಳ ಸಚಿವಾಲಯ (ಕೇಂದ್ರ ಸರ್ಕಾರ) ✓

Blackbook Vocabulary — Now in the App! ▶ Download Now on Google Play

**Q32** General Awareness

ಕೋಸಿ ನದಿಯು ಹಿಮಾಲಯದ ಸರ್ವಋತು ನದಿಯಾಗಿದ್ದರೂ ಸಹ ಬಿಹಾರದ ಬಯಲು ಪ್ರದೇಶಗಳಲ್ಲಿ ತನ್ನ ಪಥವನ್ನು ಪದೇ ಪದೇ ಬದಲಾಯಿಸುವುದನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಅದು ತನ್ನ ಜಲಾನಯನ ಪ್ರದೇಶದಲ್ಲಿ ಸೀಮಿತ ಪ್ರಮಾಣದ ಮಳೆಯನ್ನು ಪಡೆಯುತ್ತದೆ

B. ಅದು ಪಶ್ಚಿಮ ಘಟ್ಟಗಳ ಪ್ರದೇಶದಿಂದ ಹುಟ್ಟುತ್ತದೆ

C. ಅದು ಅತಿಯಾದ ಕೆಸರನ್ನು ಸಂಗ್ರಹಿಸಿ, ತನ್ನ ಹರಿವಿನ ಮಾರ್ಗವನ್ನು ಅಡ್ಡಿಪಡಿಸುತ್ತದೆ ✓

D. ಅದು ಗಟ್ಟಿಯಾದ ಬಂಡೆಗಳ ಮೂಲಕ ಹರಿಯುತ್ತದೆ ಮತ್ತು ಸವೆತವನ್ನು ಕಡಿಮೆ ಮಾಡುತ್ತದೆ

**Q33** General Awareness

ಪ್ರಾಚೀನ ಭಾರತೀಯ ವಾಸ್ತುಶಿಲ್ಪದಲ್ಲಿ ಹರಪ್ಪಾ ನಗರಗಳ ಯೋಜನೆಯನ್ನು ಯಾವ ವೈಶಿಷ್ಟ್ಯವು ಅತ್ಯುತ್ತಮವಾಗಿ ನಿರೂಪಿಸುತ್ತದೆ?

A. ಪೂಜೆಗಾಗಿ ಕಲ್ಲಿನಲ್ಲಿ ಕೆತ್ತಿದ ಸ್ಮಾರಕ ಗುಹೆಗಳು

B. ಸುವ್ಯವಸ್ಥಿತ ಒಳಚರಂಡಿ ವ್ಯವಸ್ಥೆಯೊಂದಿಗೆ ಗ್ರಿಡ್ ನಂತಹ ಬೀದಿ ವಿನ್ಯಾಸ ✓

C. ವಿಸ್ತಾರವಾದ ಕೆತ್ತನೆಗಳನ್ನು ಹೊಂದಿರುವ ದೊಡ್ಡ ದೇವಾಲಯ ಸಂಕೀರ್ಣಗಳು

D. ಧಾರ್ಮಿಕ ಕೂಟಗಳಿಗಾಗಿ ಗುಮ್ಮಟಾಕಾರದ ಸ್ತೂಪಗಳು

**Q34** General Awareness

2026ರಲ್ಲಿ, ಆಂಟೋನಿಯೊ ಗುಟೆರೆಸ್ ಅವರ ಉತ್ತರಾಧಿಕಾರಿಯಾಗಿ 10ನೇ ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಯಾವ ಅಂತಾರಾಷ್ಟ್ರೀಯ ಸಂಸ್ಥೆಯು ಪ್ರಾರಂಭಿಸಿತು?

A. ವಿಶ್ವಸಂಸ್ಥೆ ✓

B. ವಿಶ್ವ ಆರ್ಥಿಕ ವೇದಿಕೆ

C. ಅಂತರರಾಷ್ಟ್ರೀಯ ನ್ಯಾಯಾಲಯ

D. ಕಾಮನ್ವೆಲ್ತ್ ಸಚಿವಾಲಯ

**Q35** General Awareness

ಯಾವ ಸಂಕ್ಷಿಪ್ತ ರೂಪವು ಕಂಪ್ಯೂಟರ್ ಗಳಲ್ಲಿ ಬಳಸಲಾಗುವ ಕ್ಯಾರೆಕ್ಟರ್ ಎನ್ಕೋಡಿಂಗ್ ಸ್ಟ್ಯಾಂಡರ್ಡ್ (character encoding standard) ಅನ್ನು ಪ್ರತಿನಿಧಿಸುತ್ತದೆ?

A. CD

B. RAM

C. ASCII ✓

D. LAN

**Q36** General Awareness

ರೈಲ್ವೆಯ ಮೂಲಸೌಕರ್ಯದಲ್ಲಿ ಚೇನಾಬ್ ನದಿಯು ಯಾವ ರೀತಿಯಲ್ಲಿ ಜಾಗತಿಕ ಹೆಗ್ಗುರುತನ್ನು ಸಾಧಿಸಿತು?

A. ಏಷ್ಯಾದಲ್ಲಿ ಅತ್ಯಂತ ಉದ್ದದ ಕಮಾನಿನ ರೈಲ್ವೆ ಸೇತುವೆ ಎನಿಸುವ ಮೂಲಕ

B. ಜಗತ್ತಿನಲ್ಲಿ ಅತ್ಯಂತ ಉದ್ದದ ಉಕ್ಕಿನ ಅಂಕಣದ ಕಮಾನಿನ ರೈಲ್ವೆ ಸೇತುವೆಯ ಮೂಲಕ

C. ಜಗತ್ತಿನಲ್ಲಿ ಅತ್ಯಂತ ಎತ್ತರದ ಕಮಾನಿನ ರೈಲ್ವೆ ಸೇತುವೆಯ ಮೂಲಕ ✓

D. ಪರ್ವತ ಕಣಿವೆಯಲ್ಲಿ ಕಟ್ಟಲಾದ ಅತ್ಯಂತ ಉದ್ದದ ರೈಲ್ವೆ ಸೇತುವೆಯ ಮೂಲಕ

**Q37** General Awareness

2026-27ರ ಕೇಂದ್ರ ಬಜೆಟ್‌ನಲ್ಲಿ, ಭಾರತದಲ್ಲಿ ಮಾನಸಿಕ ಆರೋಗ್ಯ ಸೇವೆಯನ್ನು ಬಲಪಡಿಸಲು ಯಾವ ಹೊಸ ಸಂಸ್ಥೆಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ?

A. ನಿಮ್ಹಾನ್ಸ್-2 ✓

B. ಏಮ್ಸ್-2

C. ರಾಷ್ಟ್ರೀಯ ಆಘಾತ ಸಂಸ್ಥೆ

D. ನೀತಿ ಆಯೋಗದ ಆರೋಗ್ಯ ಕೇಂದ್ರ

**Q38** General Awareness

2015 ರಲ್ಲಿ ಪ್ರಾರಂಭಿಸಲಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ – ನಗರ (PMAY-U) ಯ ಈ ಕೆಳಗಿನವುಗಳಲ್ಲಿ ಯಾವ ಪ್ರಾಥಮಿಕ ಉದ್ದೇಶವಾಗಿದೆ?

A. ಅರ್ಹ ನಗರ ಕುಟುಂಬಗಳಿಗೆ ಪಕ್ಕಾ ಮನೆಗಳನ್ನು ಒದಗಿಸುವುದು ✓

B. ಅರ್ಹ ನಗರ ಮನೆಗಳಿಗೆ ಸರ್ವಿಸ್ ಮಾಡಿದ ವಸತಿ ನಿವೇಶನಗಳನ್ನು ಒದಗಿಸುವುದು

C. ಅರ್ಹ ನಗರ ಮನೆಗಳಿಗೆ ಕೈಗೆಟುಕುವ ದರದಲ್ಲಿ ಬಾಡಿಗೆ ಮನೆಗಳನ್ನು ಒದಗಿಸುವುದು

D. ಅರ್ಹ ನಗರ ಮನೆಗಳಿಗೆ ತಾತ್ಕಾಲಿಕ ಆಶ್ರಯಗಳನ್ನು ಒದಗಿಸುವುದು

Blackbook Vocabulary — Now in the App! ► Download Now on Google Play

**Q39** General Awareness

Ctrl + C ಬಳಸಿ ಒಂದು ಸ್ಪ್ರೆಡ್ ಶೀಟ್ ಸೆಲ್ ಅನ್ನು ಕಾಪಿ ಮಾಡಿದ ನಂತರ ಮತ್ತು ಅದನ್ನು Ctrl + V ಬಳಸಿ ಅನೇಕ ಸ್ಥಳಗಳಿಗೆ ಪೇಸ್ಟ್ ಮಾಡಿದ (ಅಂಟಿಸಿದ) ನಂತರ, ಫಲಿತಾಂಶವನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಪ್ರತಿ ಡೆಸ್ಟಿನೇಶನ್ ಸೆಲ್ ಮೂಲ ಕಂಟೆಂಟ್ ನ ತದ್ರೂಪಿ ನಕಲನ್ನು ಪಡೆಯುತ್ತದೆ ✓
- B. ಪ್ರತಿ ಯಶಸ್ವಿ ಪೇಸ್ಟ್ ಕಾರ್ಯದ ನಂತರ ಮೂಲ ಸೆಲ್ ಅನ್ನು ತೆರವುಗೊಳಿಸಲಾಗುತ್ತದೆ
- C. ಪ್ರತಿಯೊಂದು ಪೇಸ್ಟ್ ಮೌಲ್ಯವನ್ನು ಸ್ವಯಂಚಾಲಿತವಾಗಿ ಫಾರ್ಮುಲಾ ರೆಫರೆನ್ಸ್ ಆಗಿ ಪರಿವರ್ತಿತವಾಗುತ್ತದೆ
- D. ಎಲ್ಲಾ ಡೆಸ್ಟಿನೇಶನ್ ಸೆಲ್ ಗಳು ಮೂಲ ಕಂಟೆಂಟ್ ಗೆ ಕ್ರಿಯಾತ್ಮಕವಾಗಿ ಸಂಪರ್ಕದಲ್ಲಿರುತ್ತವೆ

**Q40** General Awareness

2026 ರ ಜೂನ್ ನಲ್ಲಿ, DRDO ವತಿಯಿಂದ NASM-MR ನ ಮೊದಲ ಹಾರಾಟ ಪರೀಕ್ಷೆಯನ್ನು ನಡೆಸಲಾಯಿತು. ಈ ಕ್ಷಿಪಣಿಯನ್ನು ಯಾವ ಕೆಲಸಕ್ಕಾಗಿ ವಿನ್ಯಾಸಗೊಳಿಸಲಾಗಿದೆ?

- A. ಅಲ್ಪ ವ್ಯಾಪ್ತಿಯಲ್ಲಿ ಮೇಲ್ಮೈಯಿಂದ ಆಕಾಶಕ್ಕೆ ಪ್ರತಿಬಂಧ (interception)
- B. ಮಧ್ಯಮ ವ್ಯಾಪ್ತಿಯಲ್ಲಿ ನೌಕಾಪಡೆಯ ಹಡಗು ನಿಗ್ರಹ ದಾಳಿ ✓
- C. ಮಧ್ಯಮ ವ್ಯಾಪ್ತಿಯಲ್ಲಿ ಟ್ಯಾಂಕ್ ನಿಗ್ರಹ ನಿರ್ದೇಶಿತ ದಾಳಿ
- D. ಟ್ಯಾಂಕ್ ನಿಗ್ರಹ ನಿರ್ದೇಶಿತ ದಾಳಿ

**Q41** General Awareness

2026 ರಲ್ಲಿ ನಡೆದ ಧರ್ಮ ಗಾರ್ಡಿಯನ್ ಸಮರಾಭ್ಯಾಸದ 7 ನೇ ಆವೃತ್ತಿಯಲ್ಲಿ ಯಾವ ಎರಡು ದೇಶಗಳು ಭಾಗವಹಿಸಿದ್ದವು?

- A. ಭಾರತ ಹಾಗೂ ಫ್ರಾನ್ಸ್
- B. ಭಾರತ ಮತ್ತು ಆಸ್ಟ್ರೇಲಿಯಾ
- C. ಭಾರತ ಮತ್ತು ಜಪಾನ್ ✓
- D. ಜಪಾನ್ ಮತ್ತು ಆಸ್ಟ್ರೇಲಿಯಾ

**Q42** General Awareness

ಒಬ್ಬ ರೋಗಿಯಲ್ಲಿ ಮೂತ್ರಪಿಂಡದ ಶೋಧಕ ಘಟಕಗಳು ಅಸಮರ್ಪಕವಾಗಿ ಕಾರ್ಯ ನಿರ್ವಹಿಸುವುದು ಕಂಡುಬಂದಿದೆ. ಯಾವ ಶಾರೀರಿಕ ಪ್ರಕ್ರಿಯೆಯು ಇದರಿಂದಾಗಿ ಹೆಚ್ಚು ನೇರವಾಗಿ ಬಾಧಿತವಾಗುತ್ತದೆ?

- A. ಕೆಂಪು ರಕ್ತ ಕಣಗಳಿಂದ ಆಮ್ಲಜನಕದ ಸಾಗಣೆ
- B. ರಕ್ತದಿಂದ ಸಾರಜನಕಯುಕ್ತ ತ್ಯಾಜ್ಯವನ್ನು ತೆಗೆದುಹಾಕುವುದು ✓
- C. ಬೆವರು ಉತ್ಪಾದನೆಯ ಮೂಲಕ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳುವುದು
- D. ವ್ಯಾಯಾಮದ ಸಮಯದಲ್ಲಿ ಉಸಿರಾಟದ ಪ್ರಮಾಣವನ್ನು ನಿಯಂತ್ರಿಸುವುದು

**Q43** General Awareness

ನವದೆಹಲಿಯಲ್ಲಿ ನಡೆದ ಡಿಜಿಟಲ್ ನ್ಯೂಸ್ ಪಬ್ಲಿಷರ್ಸ್ ಅಸೋಸಿಯೇಷನ್ (DNPA) ಸಮ್ಮೇಳನ 2026 ರ ಮುಖ್ಯ ಉದ್ದೇಶವೇನು?

- A. ಕ್ರೀಡಾ ಪ್ರಸಾರ ಹಕ್ಕುಗಳ ಮಾತುಕತೆಗಳನ್ನು ಉತ್ತೇಜಿಸುವುದು
- B. ಮುದ್ರಣ ಪುಸ್ತಕ ಪ್ರಕಾಶನ ಉದ್ಯಮದ ನವೀಕರಣಗಳ ಮೇಲೆ ಕೇಂದ್ರೀಕರಿಸುವುದು
- C. ರಾಜ್ಯ ಸರ್ಕಾರದ ಹೊಸ ಮಾಧ್ಯಮ ನೀತಿಯನ್ನು ಘೋಷಿಸುವುದು
- D. ಚರ್ಚೆ ಮತ್ತು ಸಹಯೋಗಕ್ಕಾಗಿ ಡಿಜಿಟಲ್ ಸುದ್ದಿ ಸಂಸ್ಥೆಗಳನ್ನು ಒಟ್ಟುಗೂಡಿಸುವುದು ✓

**Q44** General Awareness

Which law has often been discussed in relation to exemptions under the Right to Information Act, 2005?

- A. Indian Evidence Act, 1872
- B. Representation of the People Act, 1951
- C. Official Secrets Act, 1923 ✓
- D. Competition Act, 2002

**Q45** General Awareness

ರಕ್ಷಣೆ, ರೈಲ್ವೆ ಮತ್ತು ಆದಾಯ ತೆರಿಗೆಯಂತಹ ವಿಷಯಗಳನ್ನು ಭಾರತದ ಸಂವಿಧಾನದ ಯಾವ ಪಟ್ಟಿಯಲ್ಲಿ ಸೇರಿಸಲಾಗಿದೆ?

- A. ಉಳಿಕೆಯ ಪಟ್ಟಿ
- B. ರಾಜ್ಯ ಪಟ್ಟಿ
- C. ಸಮವರ್ತಿ ಪಟ್ಟಿ
- D. ಒಕ್ಕೂಟ ಪಟ್ಟಿ ✓

**Q46** General Awareness

ಅಡುಗೆ ಸೋಡಾವು ಅಡುಗೆ ಮಾಡುವಾಗ ನಿಂಬೆ ರಸ ಅಥವಾ ವಿನೆಗರ್ ನೊಂದಿಗೆ ವರ್ತಿಸಿದಾಗ ಯಾವ ಅನಿಲವು ಬಿಡುಗಡೆಯಾಗುತ್ತದೆ?

- A. ಜಲಜನಕ
- B. ಸಾರಜನಕ
- C. ಇಂಗಾಲದ ಡೈಆಕ್ಸೈಡ್ ✓
- D. ಆಮ್ಲಜನಕ

Blackbook Vocabulary — Now in the App! ▶ Download Now on Google Play

**Q47** General Awareness

2026 ರ ಫೆಬ್ರವರಿ 27 ರಂದು, ರಾಷ್ಟ್ರೀಯ ಅಂಕಿಅಂಶ ಕಚೇರಿಯು (NSO) ಜಿ.ಡಿ.ಪಿ.ಯ ಅಂದಾಜುಗಳ ಹೊಸ ಸರಣಿಯನ್ನು ಬಿಡುಗಡೆ ಮಾಡಿ, ಆಧಾರ ವರ್ಷವನ್ನು 2011-12 ರಿಂದ ಯಾವ ಹೊಸ ಆಧಾರ ವರ್ಷಕ್ಕೆ ಬದಲಾಯಿಸಿದೆ?

A. 2015-16
B. 2018-19
C. 2022-23 ✓
D. 2020-21

**Q48** General Awareness

ದೆಹಲಿ (ನಾಗರಿಕರಿಗೆ ಕಾಲಮಿತಿಯೊಳಗೆ ಮತ್ತು ಸುಲಭವಾಗಿ ಸೇವೆಗಳನ್ನು ತಲುಪಿಸುವ ಹಕ್ಕು) ವಿಧೇಯಕ, 2026 ಎಂಬುದು ಈ ಹಿಂದಿನ ಯಾವ ಶಾಸನವನ್ನು ಬದಲಿಸುತ್ತದೆ?

A. ದೆಹಲಿ (ನಾಗರಿಕರಿಗೆ ಕಾಲಮಿತಿಯೊಳಗೆ ಸೇವೆಗಳನ್ನು ತಲುಪಿಸುವ ಹಕ್ಕು) ಕಾಯ್ದೆ, 2001
B. ದೆಹಲಿ (ನಾಗರಿಕರಿಗೆ ಕಾಲಮಿತಿಯೊಳಗೆ ಸೇವೆಗಳನ್ನು ತಲುಪಿಸುವ ಹಕ್ಕು) ಕಾಯ್ದೆ, 2011 ✓
C. ದೆಹಲಿ (ನಾಗರಿಕರಿಗೆ ಕಾಲಮಿತಿಯೊಳಗೆ ಸೇವೆಗಳನ್ನು ತಲುಪಿಸುವ ಹಕ್ಕು) ಕಾಯ್ದೆ, 2019
D. ದೆಹಲಿ (ನಾಗರಿಕರಿಗೆ ಕಾಲಮಿತಿಯೊಳಗೆ ಸೇವೆಗಳನ್ನು ತಲುಪಿಸುವ ಹಕ್ಕು) ಕಾಯ್ದೆ, 2006

**Q49** General Awareness

ಸಾಂವಿಧಾನಿಕ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು "ಮೂಲ ರಚನೆಯ ಸಿದ್ಧಾಂತ" (Basic Structure Doctrine) ವನ್ನು ಯಾವ ಐತಿಹಾಸಿಕ ಪ್ರಕರಣದಲ್ಲಿ ಪ್ರತಿಪಾದಿಸಿತು?

A. ಇಂದಿರಾ ಗಾಂಧಿ ವಿರುದ್ಧ ರಾಜ್ ನಾರಾಯಣ್
B. ಗೋಲಕನಾಥ್ ವಿರುದ್ಧ ಪಂಜಾಬ್ ರಾಜ್ಯ
C. ಕೇಶವಾನಂದ ಭಾರತಿ ವಿರುದ್ಧ ಕೇರಳ ರಾಜ್ಯ ✓
D. ಮಿನರ್ವಾ ಮಿಲ್ಸ್ ವಿರುದ್ಧ ಭಾರತ ಒಕ್ಕೂಟ

**Q50** General Awareness

2026 ರ ಏಪ್ರಿಲ್ 8–23 ರ ಅವಧಿಯಲ್ಲಿ ನಡೆದ ಯುನೆಸ್ಕೋ ಕಾರ್ಯಕಾರಿ ಮಂಡಳಿಯ 224 ನೇ ಅಧಿವೇಶನವು ಎಲ್ಲಿ ನಡೆಯಿತು?

A. ಮ್ಯಾಡ್ರಿಡ್, ಸ್ಪೇನ್
B. ಪ್ಯಾರಿಸ್, ಫ್ರಾನ್ಸ್ ✓
C. ಬ್ರಸೆಲ್ಸ್, ಬೆಲ್ಜಿಯಂ
D. ರೋಮ್, ಇಟಲಿ

## Mathematics

35 Questions • Answer Key

**Q51** Mathematics

ಒಂದು ತ್ರಿಕೋನದ ಪಾದದ ಉದ್ದ 23 cm ಮತ್ತು ಅದರ ಅನುರೂಪ ಎತ್ತರ 12 cm ಆಗಿದೆ. ಈ ತ್ರಿಕೋನದ ವಿಸ್ತೀರ್ಣದ ಎರಡು ಪಟ್ಟು ವಿಸ್ತೀರ್ಣವನ್ನು ಹೊಂದಿರುವ ಚೌಕದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

A. 276 $cm^2$ ✓
B. 218 $cm^2$
C. 204 $cm^2$
D. 256 $cm^2$

**Q52** Mathematics

ಒಂದು ನೀರಿನ ತೊಟ್ಟಿಯು 15 m ಉದ್ದ ಮತ್ತು 12 m ಅಗಲವನ್ನು ಹೊಂದಿರುವ ಘನಾಭದ ಆಕಾರವನ್ನು ಹೊಂದಿದೆ. ತೊಟ್ಟಿಯ ತಳ ಮತ್ತು ಮೇಲ್ಛಾವಣಿಯ ವಿಸ್ತೀರ್ಣವು ತೊಟ್ಟಿಯ ನಾಲ್ಕು ಗೋಡೆಗಳ ವಿಸ್ತೀರ್ಣಕ್ಕೆ ಸಮನಾಗಿರುತ್ತದೆ. ಹಾಗಾದರೆ ಈ ತೊಟ್ಟಿಯಲ್ಲಿ ಎಷ್ಟು ಲೀಟರ್ ಮಳೆನೀರನ್ನು ಸಂಗ್ರಹಿಸಬಹುದು?

A. $1000 \times 10^2$ ಲೀಟರ್
B. $1200 \times 10^3$ ಲೀಟರ್ ✓
C. $1200 \times 10^2$ ಲೀಟರ್
D. 1200 ಲೀಟರ್

Blackbook Vocabulary — Now in the App! ▶ Download Now on Google Play

**Q53** Mathematics

ಒಬ್ಬ ವಿದ್ಯಾರ್ಥಿಯ ಅಂಕಗಳನ್ನು 59 ರ ಬದಲು 68 ಎಂದು ತಪ್ಪಾಗಿ ನಮೂದಿಸಲಾಗಿದೆ. ಇದರಿಂದಾಗಿ, ತರಗತಿಯ ಸರಾಸರಿ ಅಂಕಗಳು 1.8 ಹೆಚ್ಚು ಆಯಿತು. ಹಾಗಾದರೆ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

A. 6
B. 5 ✓
C. 4
D. 7

**Q54** Mathematics

AB ಮತ್ತು CD ರೇಖೆಗಳು ಸಮಾನಾಂತರವಾಗಿದ್ದು, XY ಛೇದಕ ರೇಖೆಯ ಎಡಭಾಗದಲ್ಲಿ A ಮತ್ತು C ಗಳು ಮತ್ತು ಬಲಭಾಗದಲ್ಲಿ B ಮತ್ತು D ಗಳು ಇರುತ್ತವೆ. ಛೇದಕ ರೇಖೆಯು AB ಅನ್ನು M ನಲ್ಲಿ ಮತ್ತು CD ಅನ್ನು N ನಲ್ಲಿ ಛೇದಿಸುತ್ತದೆ. ಅಲ್ಲಿ X, M, N ಮತ್ತು Y ಏಕರೇಖಾತ್ಮವಾಗಿವೆ. ಒಂದು ವೇಳೆ ∠XMA=125° ಆಗಿದ್ದರೆ, ∠CNY ನ ಅಳತೆ ಎಷ್ಟು?

A. 58°
B. 52°
C. 55° ✓
D. 50°

**Q55** Mathematics

A, B ಮತ್ತು C ಮೂವರು ಒಟ್ಟಾಗಿ ಒಂದು ಕೆಲಸವನ್ನು 37 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. B ಮತ್ತು C ಇಬ್ಬರು ಒಟ್ಟಾಗಿ ಅದೇ ಕೆಲಸವನ್ನು 74 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. B ಅವರು A ಅವರಿಗಿಂತ 50% ಹೆಚ್ಚು ದಕ್ಷರು. A, B ಮತ್ತು C ಮೂವರೂ ಒಟ್ಟಾಗಿ 28 ದಿನಗಳ ಕಾಲ ಕೆಲಸ ಮಾಡುತ್ತಾರೆ. ಉಳಿದ ಕೆಲಸವನ್ನು B ಒಬ್ಬರೇ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಬಲ್ಲರು?

A. 14 ದಿನಗಳು
B. 9 ದಿನಗಳು
C. 13 ದಿನಗಳು
D. 12 ದಿನಗಳು ✓

**Q56** Mathematics

ಒಬ್ಬ ಅಂಗಡಿಯವನು ₹400 ಕ್ಕೆ ಒಂದೇ ರೀತಿಯ 20 ವಸ್ತುಗಳನ್ನು ಖರೀದಿಸುತ್ತಾನೆ. ಎಲ್ಲಾ ವಸ್ತುಗಳ ಮಾರಾಟ ಬೆಲೆಯು ಏಕರೂಪವಾಗಿದ್ದರೆ, 25% ಲಾಭ ಗಳಿಸಲು ಅವನು ₹400 ಕ್ಕೆ ಎಷ್ಟು ವಸ್ತುಗಳನ್ನು ಮಾರಾಟ ಮಾಡಬೇಕು?

A. 18
B. 20
C. 15
D. 16 ✓

**Q57** Mathematics

ಮೌಲ್ಯಮಾಪನ ಮಾಡಿ : $(-37) + (-56) \div (-3) \times 3$

A. 21
B. 17
C. 15
D. 19 ✓

**Q58** Mathematics

2025 m ವೃತ್ತಾಕಾರದ ಓಟದಲ್ಲಿ ಕುಶಾಲ್ ಮತ್ತು ಯಾಮಿನಿ ಇಬ್ಬರೂ ಒಂದೇ ಬಿಂದುವಿನಿಂದ ಮತ್ತು ಏಕಕಾಲದಲ್ಲಿ ಕ್ರಮವಾಗಿ 33 km/h ಮತ್ತು 36 km/h ವೇಗದಲ್ಲಿ ಓಟವನ್ನು ಆರಂಭಿಸುತ್ತಾರೆ. ಅವರಿಬ್ಬರೂ ಒಂದೇ ದಿಕ್ಕಿನಲ್ಲಿ ಓಡುತ್ತಿರುವಾಗ ಮೊದಲ ಬಾರಿಗೆ ಅವರು ಆ ಪಥದಲ್ಲಿ ಎಷ್ಟು ಸಮಯದ ನಂತರ ಮತ್ತೆ ಮುಖಾಮುಖಿಯಾಗುತ್ತಾರೆ?

A. 2,438 ಸೆಕೆಂಡುಗಳು
B. 2434 ಸೆಕೆಂಡುಗಳು
C. 2426 ಸೆಕೆಂಡುಗಳು
D. 2430 ಸೆಕೆಂಡುಗಳು ✓

**Q59** Mathematics

The mean of a data is 41 and its median is 50. The mode (using empirical relation) of the data is:

A. 156
B. 150
C. 91
D. 68 ✓

**Q60** Mathematics

ಒಂದು ಸ್ಟೇಷನರಿ ಅಂಗಡಿಯು ನೋಟ್‌ಬುಕ್‌ಗಳನ್ನು ಮತ್ತು ಪೆನ್ನುಗಳನ್ನು ಮಾರಾಟ ಮಾಡುತ್ತದೆ. 5 ನೋಟ್‌ಬುಕ್‌ಗಳು ಮತ್ತು 3 ಪೆನ್ನುಗಳ ಬೆಲೆ ₹146 ಆಗಿದ್ದರೆ, 7 ನೋಟ್‌ಬುಕ್‌ಗಳು ಮತ್ತು 2 ಪೆನ್ನುಗಳ ಬೆಲೆ ₹178 ಆಗಿರುತ್ತದೆ. ಒಬ್ಬ ವಿದ್ಯಾರ್ಥಿಯು 4 ನೋಟ್‌ಬುಕ್‌ಗಳು ಮತ್ತು 6 ಪೆನ್ನುಗಳನ್ನು ಖರೀದಿಸಿದರೆ, ಆ ವಿದ್ಯಾರ್ಥಿಯು ಎಷ್ಟು ಹಣವನ್ನು ಪಾವತಿಸಬೇಕಾಗುತ್ತದೆ?

A. ₹160 ✓
B. ₹168
C. ₹176
D. ₹154

Blackbook Vocabulary — Now in the App! ▶ Download Now on Google Play

**Q61** Mathematics

ಮೂರು ಸಂಖ್ಯೆಗಳ ಸರಾಸರಿ 15 ಆಗಿದ್ದರೆ ಮತ್ತು ಅದರಲ್ಲಿ ಎರಡು ಸಂಖ್ಯೆಗಳು 10 ಮತ್ತು 20 ಆಗಿದ್ದರೆ, ಮೂರನೇ ಸಂಖ್ಯೆಯನ್ನು ಕಂಡುಹಿಡಿಯಿರಿ.

- A. 15 ✓
- B. 10
- C. 20
- D. 25

**Q62** Mathematics

ಒಂದು ಸ್ಥಳದಿಂದ 1.45 km ದೂರದಲ್ಲಿ ಬಂದೂಕಿನಿಂದ ಗುಂಡು ಹಾರಿಸಲಾಗುತ್ತದೆ. ಅದರ ಶಬ್ದವು 5 ಸೆಕೆಂಡುಗಳ ನಂತರ ಕೇಳಿಸಿತು. ಹಾಗಾದರೆ ಶಬ್ದವು ಚಲಿಸುವ ವೇಗವನ್ನು (m/s) ಕಂಡುಹಿಡಿಯಿರಿ.

- A. 240 m/s
- B. 300 m/s
- C. 290 m/s ✓
- D. 145 m/s

**Q63** Mathematics

A ಮತ್ತು B ಇಬ್ಬರೂ ಒಂದು ಕೆಲಸವನ್ನು 24 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಒಂದು ವೇಳೆ A ಒಬ್ಬರೇ ಆ ಕೆಲಸವನ್ನು 60 ದಿನಗಳಲ್ಲಿ ಪೂರ್ಣಗೊಳಿಸಬಹುದಾದರೆ, B ಒಬ್ಬರೇ ಆ ಕೆಲಸದ ನಾಲ್ಕನೇ ಒಂದು ಭಾಗವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಬಲ್ಲರು?

- A. 9
- B. 10 ✓
- C. 12
- D. 8

**Q64** Mathematics

ಒಬ್ಬ ಅಂಗಡಿಯವನು ತನ್ನ ಸರಕುಗಳನ್ನು 5% ನಷ್ಟದಲ್ಲಿ ಮಾರಾಟ ಮಾಡುವುದಾಗಿ ಹೇಳಿಕೊಳ್ಳುತ್ತಾನೆ. ಆದರೆ ಉದ್ದೇಶಪೂರ್ವಕವಾಗಿ ಮೋಸದ ತಕ್ಕಡಿಯನ್ನು ಬಳಸಿ 40% ಲಾಭವನ್ನು ಗಳಿಸುತ್ತಾನೆ. ಹಾಗಾದರೆ ಅವನು 1 kg ಗೆ ಬಳಸುವ ನಿಜವಾದ ತೂಕ ಎಷ್ಟು? (ಒಂದು ದಶಮಾಂಶ ಸ್ಥಾನಕ್ಕೆ ಸೀಮಿತಗೊಳಿಸಿ)

- A. 678.6 gm ✓
- B. 675.3 gm
- C. 682.8 gm
- D. 680.9 gm

**Q65** Mathematics

ಒಬ್ಬ ಅಂಗಡಿ ಮಾಲೀಕನು ತನ್ನ ಅಸಲು ಬೆಲೆಯ ಮೇಲೆ 40% ಲಾಭವನ್ನು ನಿರೀಕ್ಷಿಸುತ್ತಾನೆ. ಒಂದು ವಾರದಲ್ಲಿ, ಆತನ ಮಾರಾಟ ಮೊತ್ತವು ₹3,955 ಆಗಿದ್ದರೆ, ಆತನ ಲಾಭ ಎಷ್ಟು (₹ ಗಳಲ್ಲಿ)?

- A. 1,133
- B. 1,130 ✓
- C. 1,129
- D. 1,132

**Q66** Mathematics

ಮೌಲ್ಯಮಾಪನ ಮಾಡಿ: 11 − 12 ÷ 12 × 8

- A. 2
- B. 4
- C. 1
- D. 3 ✓

**Q67** Mathematics

ಒಂದು ವೇಳೆ A ಯ 25% ವು B ಯ 40% ಕ್ಕೆ ಸಮನಾಗಿದ್ದರೆ, ಮತ್ತು B ಯ 30% ವು C ಯ 45% ಕ್ಕೆ ಸಮನಾಗಿದ್ದರೆ, A:B:C ಯು ಹೀಗಿರುತ್ತವೆ:

- A. 24:15:10 ✓
- B. 8:5:3
- C. 12:9:7
- D. 24:14:9

**Q68** Mathematics

ಒಂದು ನಿರ್ದಿಷ್ಟ ಸರಳ ಬಡ್ಡಿ ದರದಲ್ಲಿ ₹620 ಮೊತ್ತವು 2 ವರ್ಷಗಳಲ್ಲಿ ₹910 ಆಗುತ್ತದೆ. 2 ವರ್ಷಗಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

- A. 290 ✓
- B. 300
- C. 305
- D. 285

**Q69** Mathematics

ಈ ಅನುಪಾತಗಳನ್ನು ಏರಿಕೆ ಕ್ರಮದಲ್ಲಿ ಜೋಡಿಸಿ: 6:7, 11:12, 21:23, 31:35, 43:45.

- A. 6:7, 31:35, 11:12, 43:45, 21:23
- B. 6:7, 11:12, 21:23, 31:35, 43:45
- C. 6:7, 31:35, 11:12, 21:23, 43:45
- D. 6:7, 31:35, 21:23, 11:12, 43:45 ✓

Blackbook Vocabulary — Now in the App! ► Download Now on Google Play

**Q70** Mathematics

ಕ್ರಿಷ್ ಅವರ ಬಳಿ ₹1,352 ಇದ್ದು, ಅದನ್ನು ಅವರು ತಮ್ಮ ಇಬ್ಬರು ಪುತ್ರರಾದ ವೀರ್ ಮತ್ತು ನಿತಿನ್ ನಡುವೆ ಹಂಚಿದರು. ಇಬ್ಬರೂ ತಮ್ಮ ತಮ್ಮ ಮೊತ್ತವನ್ನು 8% ವಾರ್ಷಿಕ ಚಕ್ರಬಡ್ಡಿ ದರದಲ್ಲಿ ಹೂಡಿಕೆ ಮಾಡುತ್ತಾರೆ. ಒಂದು ವೇಳೆ 18 ವರ್ಷಗಳ ನಂತರ ವೀರ್ ಮತ್ತು 19 ವರ್ಷಗಳ ನಂತರ ನಿತಿನ್ ಅವರು ಪಡೆದ ಮೊತ್ತವು ಸಮಾನವಾಗಿದ್ದರೆ, ಕ್ರಿಷ್ ಅವರು ನಿತಿನ್ ಅವರಿಗೆ ಎಷ್ಟು ಹಣವನ್ನು (₹ ಗಳಲ್ಲಿ) ನೀಡಿದ್ದರು?

A. 500

B. 802

C. 702

D. 650 ✓

**Q71** Mathematics

24 ಕೆಲಸಗಾರರನ್ನು ಹೊಂದಿರುವ ಒಂದು ತಂಡಕ್ಕೆ ಒಂದು ಕೆಲಸವನ್ನು 15 ದಿನಗಳಲ್ಲಿ ಮುಗಿಸಲು ವಹಿಸಲಾಗಿದೆ. 1 ದಿನ ಕೆಲಸ ಮಾಡಿದ ನಂತರ, 8 ಕೆಲಸಗಾರರು ಕೆಲಸವನ್ನು ಬಿಡುತ್ತಾರೆ. ಎಲ್ಲಾ ಕೆಲಸಗಾರರು ಸಮಾನವಾಗಿ ದಕ್ಷರಾಗಿದ್ದರೆ, ಮಿಕ್ಕ ಕೆಲಸಗಾರರಿಗೆ ಉಳಿದಿರುವ ಕೆಲಸವನ್ನು ಪೂರ್ಣಗೊಳಿಸಲು ಎಷ್ಟು ಹೆಚ್ಚುವರಿ ದಿನಗಳು ಬೇಕಾಗುತ್ತವೆ?

A. 18 ದಿನಗಳು

B. 21 ದಿನಗಳು ✓

C. 28 ದಿನಗಳು

D. 25 ದಿನಗಳು

**Q72** Mathematics

ಒಂದು ಭಾಗಾಕಾರದ ಮೊತ್ತದಲ್ಲಿ, ಭಾಜಕವು ಭಾಗಲಬ್ಧದ 3 ಪಟ್ಟು ಮತ್ತು ಶೇಷದ 8 ಪಟ್ಟು ಇದೆ. ಒಂದು ವೇಳೆ ಶೇಷವು 12 ಆಗಿದ್ದರೆ, ಭಾಜ್ಯ ಎಷ್ಟು?

A. 3048

B. 3072

C. 3066

D. 3084 ✓

**Q73** Mathematics

ಒಬ್ಬ ಸೈಕಲ್ ಸವಾರನು ಮೊದಲ 30 km ಅನ್ನು 20 km/h ವೇಗದಲ್ಲಿ, ಮುಂದಿನ 50 km ಅನ್ನು 25 km/h ವೇಗದಲ್ಲಿ ಮತ್ತು ಕೊನೆಯ 20 km ಅನ್ನು 10 km/h ವೇಗದಲ್ಲಿ ಕ್ರಮಿಸುತ್ತಾನೆ. ಹಾಗಾದರೆ ಸಂಪೂರ್ಣ 100 km ಪ್ರಯಾಣದಲ್ಲಿ (ಸಮೀಪದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ) ಸೈಕಲ್ ಸವಾರನ ಸರಾಸರಿ ವೇಗ ಎಷ್ಟು?

A. 19 km/h

B. 18 km/h ✓

C. 20 km/h

D. 21 km/h

**Q74** Mathematics

A, B ಮತ್ತು C ಅವರ ನಡುವೆ ಒಂದು ಮೊತ್ತದ ಹಣವನ್ನು ಹಂಚಲಾಗಿದೆ. A ಅವರಿಗೆ B ಅವರಿಗಿಂತ ಎರಡು ಪಟ್ಟು ಮತ್ತು B ಅವರಿಗೆ C ಅವರಿಗಿಂತ ಮೂರು ಪಟ್ಟು ಹಣ ಸಿಗುತ್ತದೆ. ಒಂದು ವೇಳೆ ಒಟ್ಟು ಮೊತ್ತವು ₹720 ಆಗಿದ್ದರೆ, C ಅವರಿಗೆ ಸಿಗುವ ಹಣವೆಷ್ಟು?

A. ₹84

B. ₹96

C. ₹72 ✓

D. ₹60

**Q75** Mathematics

ಒಂದು ವೇಳೆ 5 ಕೆಲಸಗಾರರು ದಿನಕ್ಕೆ 8 ಗಂಟೆಯಂತೆ 12 ದಿನಗಳವರೆಗೆ ಕೆಲಸ ಮಾಡಿ 2400 ಯೂನಿಟ್‌ಗಳನ್ನು ಉತ್ಪಾದಿಸಿದರೆ, ಪ್ರತಿಯೊಬ್ಬ ಕೆಲಸಗಾರನ ಉತ್ಪಾದಕತೆಯು ಸ್ಥಿರವಾಗಿರುತ್ತದೆ ಎಂದು ಭಾವಿಸಿದರೆ, 10 ಕೆಲಸಗಾರರು ದಿನಕ್ಕೆ 8 ಗಂಟೆಯಂತೆ 12 ದಿನಗಳವರೆಗೆ ಕೆಲಸ ಮಾಡಿ ಎಷ್ಟು ಯೂನಿಟ್‌ಗಳನ್ನು ಉತ್ಪಾದಿಸುತ್ತಾರೆ?

A. 4800 ಯೂನಿಟ್‌ಗಳು ✓

B. 2400 ಯೂನಿಟ್‌ಗಳು

C. 3600 ಯೂನಿಟ್‌ಗಳು

D. 6000 ಯೂನಿಟ್‌ಗಳು

**Q76** Mathematics

ಮೋಹನ್ ಮತ್ತು ಡೇವಿಡ್ ಎಂಬ ಇಬ್ಬರು ಸ್ನೇಹಿತರ ಮಾಸಿಕ ಆದಾಯಗಳು ಕ್ರಮವಾಗಿ 6 : 8 ಅನುಪಾತದಲ್ಲಿವೆ ಮತ್ತು ಅವರಲ್ಲಿ ಪ್ರತಿಯೊಬ್ಬರೂ ಪ್ರತಿ ತಿಂಗಳು ₹51,000 ಅನ್ನು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರ ಮಾಸಿಕ ವೆಚ್ಚದ ನಡುವಿನ ಅನುಪಾತವು 2 : 4 ಆಗಿದ್ದರೆ, ಮೋಹನ್ ಅವರ ಮಾಸಿಕ ಆದಾಯವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

A. 77,500

B. 1,07,100

C. 75,500

D. 76,500 ✓

**Q77** Mathematics

3, 77 ಮತ್ತು 33 ಈ ಸಂಖ್ಯೆಗಳ ಲ.ಸಾ.ಅ. ಕಂಡುಹಿಡಿಯಿರಿ.

A. 77

B. 231 ✓

C. 242

D. 462

Blackbook Vocabulary — Now in the App! ▶ Download Now on Google Play

**Q78** Mathematics

ಒಂದು ಲ್ಯಾಪ್‌ಟಾಪ್‌ಗೆ ₹45,000 ಎಂದು ನಮೂದಿಸಲಾಗಿದೆ. ಅಂಗಡಿಯವನು ನಮೂದಿತ ಬೆಲೆಯ ಮೇಲೆ 25% ರಿಯಾಯಿತಿ ನೀಡುತ್ತಾನೆ. ರಿಯಾಯಿತಿಯ ನಂತರ, ಲ್ಯಾಪ್‌ಟಾಪ್ ಅನ್ನು ಮಾರಾಟದ ಬೆಲೆಯ ಮೇಲೆ ಹೆಚ್ಚುವರಿ 10% ತೆರಿಗೆಯೊಂದಿಗೆ ಮಾರಾಟ ಮಾಡಲಾಗುತ್ತದೆ. ಹಾಗಾದರೆ ರಿಯಾಯಿತಿ ಮತ್ತು ತೆರಿಗೆಯ ನಂತರ ಲ್ಯಾಪ್‌ಟಾಪ್‌ನ ಅಂತಿಮ ಬೆಲೆ ಎಷ್ಟು?

A. ₹33,750

B. ₹37,125 ✓

C. ₹34,650

D. ₹37,500

**Q79** Mathematics

ಒಂದು ಸಂಖ್ಯೆಯ 7% ಮೊತ್ತವು ಅದೇ ಸಂಖ್ಯೆಯ 9% ರ ಎಷ್ಟು ಶೇಕಡಾಕ್ಕೆ ಸಮ? (ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ.)

A. 78.57%

B. 21.87%

C. 43.75%

D. 77.78% ✓

**Q80** Mathematics

54 cm × 44 cm × 30 cm ಅಳತೆಯ ಸೀಸದ ಘನರೂಪದ ಘನಾಭದಿಂದ 3 cm ತ್ರಿಜ್ಯದ ಎಷ್ಟು ಗೋಳಾಕಾರದ ಸೀಸದ ಗುಂಡುಗಳನ್ನು ತಯಾರಿಸಬಹುದು?

( $\pi = \frac{22}{7}$ ಬಳಸಿ)

A. 640

B. 600

C. 620

D. 630 ✓

**Q81** Mathematics

ಒಂದು ವೇಳೆ $5 \sin y + \cos y = \sqrt{13} \sin y$ ಆಗಿದ್ದರೆ, $\tan y$ ಯ ಮೌಲ್ಯವನ್ನು ಕಂಡುಹಿಡಿಯಿರಿ.

A. $\frac{-5 - \sqrt{13}}{17}$

B. $\frac{-5 - \sqrt{13}}{22}$

C. $\frac{-5 - \sqrt{13}}{12}$ ✓

D. $\frac{-6 - \sqrt{13}}{12}$

Blackbook Vocabulary — Now in the App! ▶ Download Now on Google Play

**Q82** Mathematics

$7.065\ m^3$ ಘನಫಲವನ್ನು ಹೊಂದಿರುವ ಅರ್ಧಗೋಳಾಕಾರದ ಪಾತ್ರೆಯ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi = 3.14$ ಬಳಸಿ)

A. 18.125 $m^2$

B. 35.125 $m^2$

C. 28.365 $m^2$

D. 21.195 $m^2$ ✓

**Q83** Mathematics

$2^{0.5}$, $2^{1.5}$ ಮತ್ತು $2^{2.5}$ ಇದರ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

A. $2^{0.5}$

B. $2^{3.5}$ ✓

C. $2^4$

D. $2^2$

**Q84** Mathematics

Consider the data set: 4, 8, 6, 5, 3, 9. Find the variance.

A. $\frac{161}{35}$

B. $\frac{161}{36}$ ✓

C. $\frac{151}{35}$

D. $\frac{151}{36}$

**Q85** Mathematics

$5^8 \times 6^7 \times 11^4$ ಸಂಖ್ಯೆಯ ಅವಿಭಾಜ್ಯ ಅಪವರ್ತನಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಿರಿ.

A. 30

B. 28

C. 22

D. 26 ✓

Blackbook Vocabulary — Now in the App! ► Download Now on Google Play

**Q86** General Intelligence & Reasoning

Refer to the following number, symbol series and answer the question. (Counting to be done from left to right only. All numbers are single digit number only.).
(Left) ? / & @ 9 # @ % * / \ $ % * < & 5 5 2 > 3 (Right)
How many such numbers are there each of which is immediately preceded by a symbol and also immediately followed by a symbol?

- A. Three
- B. None
- C. One ✓
- D. Two

**Q87** General Intelligence & Reasoning

ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಈ ಕೆಳಗಿನ ಅಕ್ಷರ ಗುಚ್ಛಗಳ ನಾಲ್ಕು ಜೋಡಿಗಳಲ್ಲಿ ಮೂರು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು, ಒಂದೇ ಗುಂಪಿಗೆ ಸೇರುತ್ತವೆ. ಗುಂಪಿಗೆ **ಸೇರದ** ಅಕ್ಷರ ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ ಗುಚ್ಛ ಜೋಡಿಯು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ ಗುಚ್ಛಗಳಲ್ಲಿನ ಅವುಗಳ ಸ್ಥಾನವನ್ನು ಆಧರಿಸಿ ಸೇರದೆ ಇರುವುದಲ್ಲ.)

- A. CA – BZ
- B. KD – HB ✓
- C. JK – IJ
- D. GJ – FI

**Q88** General Intelligence & Reasoning

A × Y ಎಂದರೆ "A ಅವರು Y ಅವರ ತಾಯಿ".
A – Y ಎಂದರೆ "A ಅವರು Y ಅವರ ಮಗಳು".
A $ Y ಎಂದರೆ "A ಅವರು Y ಅವರ ತಂದೆ".
A @ Y ಎಂದರೆ "A ಅವರು Y ಅವರ ಗಂಡ".

ಮೇಲಿನದನ್ನು ಆಧರಿಸಿ, 'B @ Z – E $ Q' ಆಗಿದ್ದರೆ, B ಅವರು Q ಅವರಿಗೆ ಹೇಗೆ ಸಂಬಂಧಿ?

- A. ತಂದೆಯ ಸಹೋದರಿ
- B. ಮಗನ ಹೆಂಡತಿ
- C. ಸಹೋದರನ ಹೆಂಡತಿ
- D. ಸಹೋದರಿಯ ಗಂಡ ✓

**Q89** General Intelligence & Reasoning

ಒಂದು ವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '–' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

67 C 3 B 19 C (84 A 2) D 6 = ?

- A. 154
- B. 173
- C. 172
- D. 160 ✓

**Q90** General Intelligence & Reasoning

ಈ ಕೆಳಗಿನ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಹಾಕಿದಾಗ ಸರಣಿಯನ್ನು ತರ್ಕಬದ್ಧವಾಗಿ ಪೂರ್ಣಗೊಳಿಸುವ ಅಕ್ಷರ-ಸಂಖ್ಯಾ ಗುಚ್ಛ ಯಾವುದು?

WOG 147, BKB 163, GGW 179, LCR 195, QYM 211, ?

- A. UTF 227
- B. WVG 225
- C. VUH 227 ✓
- D. VWG 225

**Q91** General Intelligence & Reasoning

ಈ ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆರಿಸಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.
LIF : HEB
WUH : SQD

- A. TQV : PMR ✓
- B. KOT : GKQ
- C. JLG : EGC
- D. HRP : DOL

Blackbook Vocabulary — Now in the App! ▸ Download Now on Google Play

**Q92** General Intelligence & Reasoning

ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

EKP GMR IOT KQV ?

A. MRY

B. MSY

C. MRX

D. MSX ✓

**Q93** General Intelligence & Reasoning

Refer to the following letter and symbol series and answer the question that follows.

(Left) M K ∗ J & H ^ G % F $ D # S @ S ! Z + ? N (Right)

If all the letters are dropped from the series, which of the following will be ninth from the right?

A. @

B. & ✓

C. #

D. %

**Q94** General Intelligence & Reasoning

ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

ಪ್ರಶ್ನೆ:
F, I, S, C ಮತ್ತು L ಎಂಬ ಐದು ಕಂಬಗಳು ವಿಭಿನ್ನ ಎತ್ತರಗಳನ್ನು ಹೊಂದಿವೆ. ಯಾವ ಕಂಬವು ಅತ್ಯಂತ ಕಡಿಮೆ ಎತ್ತರ ಹೊಂದಿದೆ?

ಹೇಳಿಕೆಗಳು:
(I) S ಕಂಬವು ಕೇವಲ ಎರಡು ಕಂಬಗಳಿಗಿಂತ ಎತ್ತರವಾಗಿದೆ. F ಕಂಬವು S ಗಿಂತ ಕಡಿಮೆ ಎತ್ತರ ಹೊಂದಿದೆ ಮತ್ತು I ಕಂಬವು F ಕಂಬಕ್ಕಿಂತ ಕಡಿಮೆ ಎತ್ತರ ಹೊಂದಿದೆ.
(II) C ಯು L ಗಿಂತ ಎತ್ತರವಾಗಿದೆ.

A. ಹೇಳಿಕೆ II ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ.

B. ಹೇಳಿಕೆ I ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ II ಯಲ್ಲಿನ ಮಾಹಿತಿಯು ಸಾಕಾಗುವುದಿಲ್ಲ. ✓

C. I ಮತ್ತು IIನೇ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು (ಹೇಳಿಕೆ I ಅಥವಾ ಹೇಳಿಕೆ II ಮಾತ್ರವೇ ಸಾಲುವುದಿಲ್ಲ) ಈ ಪ್ರಶ್ನೆಯನ್ನು ಉತ್ತರಿಸಲು ಸಾಕು.

D. I ಮತ್ತು IIನೇ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು ಪ್ರಶ್ನೆಯನ್ನು ಉತ್ತರಿಸಲು ಸಾಕಾಗುವುದಿಲ್ಲ

**Q95** General Intelligence & Reasoning

A, B, C, D, E, F ಮತ್ತು G ಎನ್ನುವ ಎಲ್ಲರೂ ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. G ಅವರು A ಅವರ ಎಡಕ್ಕೆ ಎರಡನೆಯವರಾಗಿ ಕುಳಿತಿದ್ದಾರೆ. A ಅವರು F ಅವರ ಎಡಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ. G ಅವರು E ಅವರ ತಕ್ಷಣದ ಬಲಕ್ಕೆ ಕುಳಿತಿದ್ದಾರೆ. B ಅವರು D ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. ಹಾಗಾದರೆ, E ಅವರಿಗೆ ಸಂಬಂಧಿಸಿದಂತೆ F ಅವರ ಸ್ಥಾನ ಯಾವುದು?

A. ಎಡಕ್ಕೆ ಎರಡನೆ

B. ತಕ್ಷಣದ ಎಡಕ್ಕೆ ✓

C. ಬಲಕ್ಕೆ ಎರಡನೆ

D. ತಕ್ಷಣದ ಬಲಕ್ಕೆ

Blackbook Vocabulary — Now in the App! ▶ Download Now on Google Play

generated by rank.qmaths.in

**Q96** General Intelligence & Reasoning

ಒಂದು ವೇಳೆ 'P' ಎಂದರೆ '×', 'Q' ಎಂದರೆ '÷', 'R' ಎಂದರೆ '–' ಮತ್ತು 'S' ಎಂದರೆ '+' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

12 P 9 S (98 Q 7) P 3 R 25 = ?

A. 133

B. 198

C. 142

D. 125 ✓

**Q97** General Intelligence & Reasoning

ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಈ ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿಯಲ್ಲಿ, ಎರಡನೇ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ, ಮತ್ತು ಈ ಪ್ರಕ್ರಿಯೆಯು ಹೀಗೆಯೇ ಮುಂದುವರೆಯುತ್ತದೆ. ಹಾಗಾದರೆ ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವ ಸಂಖ್ಯಾ ಗಣಗಳ ರೀತಿಯ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.)
3 – 9 – 27 – 32 ;
4 – 16 – 48 – 53

A. 6-36-72-80

B. 8-64-128-150

C. 5 -25-75-80 ✓

D. 7 -49-98-145

**Q98** General Intelligence & Reasoning

A, B, C, D, E, F ಮತ್ತು G ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವುಗಳನ್ನು ಅದೇ ಕ್ರಮದಲ್ಲಿ ಇಡಬೇಕೆಂದಿಲ್ಲ. G ಪೆಟ್ಟಿಗೆಯನ್ನು ಕೆಳಗಿನಿಂದ ಮೂರನೆಯ ಸ್ಥಾನದಲ್ಲಿ ಇಡಲಾಗಿದೆ. G ಮತ್ತು C ಪೆಟ್ಟಿಗೆಗಳ ನಡುವೆ ಎರಡು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. F ಪೆಟ್ಟಿಗೆಯನ್ನು ಮಾತ್ರ B ಪೆಟ್ಟಿಗೆಯ ಕೆಳಗಿನ ಸ್ಥಾನದಲ್ಲಿ ಇಡಲಾಗಿದೆ. E ಪೆಟ್ಟಿಗೆಯನ್ನು A ಪೆಟ್ಟಿಗೆಯ ತಕ್ಷಣದ ಕೆಳಗಿನ ಸ್ಥಾನದಲ್ಲಿ ಇಡಲಾಗಿದೆ. ಹಾಗಾದರೆ ಯಾವ ಪೆಟ್ಟಿಗೆಯನ್ನು ಮೇಲಿನಿಂದ ನಾಲ್ಕನೆಯ ಸ್ಥಾನದಲ್ಲಿ ಇಡಲಾಗಿದೆ?

A. E ✓

B. B

C. F

D. A

**Q99** General Intelligence & Reasoning

ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿದ ಒಂದು ನಿರ್ದಿಷ್ಟ ರೀತಿಯಲ್ಲಿ VZNT ಎಂಬುದು UYMS ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, RJKS ಎಂಬುದು QIJR ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, AFLM ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

A. ZGML

B. ZEKL ✓

C. BGMN

D. YDJK

**Q100** General Intelligence & Reasoning

FANTAIL ಪದದಲ್ಲಿರುವ, ಪ್ರತಿ ಸ್ವರಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣ ಮುಂದಿನ ಬರುವ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣ ಹಿಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಹೊಸ ಗುಂಪಿನಲ್ಲಿ ಎಷ್ಟು ಅಕ್ಷರಗಳು ನಿಖರವಾಗಿ ಎರಡು ಬಾರಿ ಕಾಣಿಸಿಕೊಳ್ಳುತ್ತವೆ?

A. ಶೂನ್ಯ

B. ಒಂದು ✓

C. ಎರಡು

D. ಮೂರು

Blackbook Vocabulary — Now in the App! ▶ Download Now on Google Play

**Q101** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'CADS' ಎಂಬುದನ್ನು '4689' ಎಂದು ಸಂಕೇತಿಸಲಾಗಿದೆ ಮತ್ತು 'DASH' ಎಂಬುದನ್ನು '6985' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ 'H' ಎಂಬುದನ್ನು ಹೇಗೆ ಸಂಕೇತಿಸಲಾಗುತ್ತದೆ?

A. 9

B. 8

C. 6

D. 5 ✓

**Q102** General Intelligence & Reasoning

ಸುಮಿತ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಆರಂಭಿಸಿ ಪೂರ್ವದ ಕಡೆಗೆ 28 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 25 km ಚಲಿಸುತ್ತಾರೆ. ನಂತರ ಎಡಕ್ಕೆ ತಿರುಗಿ 29 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 27 km ಚಲಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 1 km ಚಾಲನೆ ಮಾಡಿ P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

A. 3 km ಪೂರ್ವಕ್ಕೆ

B. 1 km ಪಶ್ಚಿಮಕ್ಕೆ

C. 2 km ಉತ್ತರಕ್ಕೆ ✓

D. 4 km ದಕ್ಷಿಣಕ್ಕೆ

**Q103** General Intelligence & Reasoning

ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ, 6 ಎಂಬುದು 32 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ, 2 ಎಂಬುದು 12 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 9 ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

(**ಸೂಚನೆ**: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

A. 47 ✓

B. 45

C. 52

D. 49

**Q104** General Intelligence & Reasoning

ಈ ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

25 44 39 58 53 ?

A. 72 ✓

B. 77

C. 82

D. 58

**Q105** General Intelligence & Reasoning

ಲಲಿತ್ ಅವರು A ಬಿಂದುವಿನಿಂದ ಚಾಲನೆಯನ್ನು ಪ್ರಾರಂಭಿಸಿ ಉತ್ತರ ದಿಕ್ಕಿಗೆ 75 km ಚಲಿಸುತ್ತಾನೆ. ನಂತರ ಅವನು ಎಡಕ್ಕೆ ತಿರುಗಿ 80 km ಚಲಿಸುತ್ತಾನೆ. ನಂತರ ಎಡಕ್ಕೆ ತಿರುಗಿ 85 km ಚಲಿಸುತ್ತಾನೆ. ನಂತರ ಎಡಕ್ಕೆ ತಿರುಗಿ 89 km ಚಲಿಸುತ್ತಾನೆ. ನಂತರ ಅವನು ಅಂತಿಮವಾಗಿ ಎಡಕ್ಕೆ ತಿರುಗಿ 10 km ಚಲಿಸಿ P ಬಿಂದುವಿನಲ್ಲಿ ನಿಲ್ಲುತ್ತಾನೆ. ಅವನು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನ ಕಡೆಗೆ ಚಲಿಸಬೇಕು? (ನಿರ್ದಿಷ್ಟವಾಗಿ ತಿಳಿಸದ ಹೊರತು ಎಲ್ಲಾ ತಿರುವುಗಳು 90 ಡಿಗ್ರಿಗಳ ತಿರುವುಗಳಾಗಿವೆ.)

A. 8 km ಪಶ್ಚಿಮಕ್ಕೆ

B. 11 km ಪೂರ್ವಕ್ಕೆ

C. 10 km ಪಶ್ಚಿಮಕ್ಕೆ

D. 9 km ಪಶ್ಚಿಮಕ್ಕೆ ✓

**Q106** General Intelligence & Reasoning

ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕು ಅಕ್ಷರ ಗುಚ್ಛ ಜೋಡಿಗಳಲ್ಲಿ ಮೂರು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು, ಒಂದೇ ಗುಂಪಿಗೆ ಸೇರುತ್ತವೆ. ಗುಂಪಿಗೆ **ಸೇರದ** ಅಕ್ಷರ ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ ಗುಚ್ಛದಲ್ಲಿನ ಅವುಗಳ ಸ್ಥಾನವನ್ನು ಆಧರಿಸಿಲ್ಲ.)

A. SX - UA

B. TC - VE ✓

C. MI - OL

D. JP - LS

Blackbook Vocabulary — Now in the App! ▶ Download Now on Google Play

generated by rank.qmaths.in

**Q107** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'AIDS' ಎಂಬುದನ್ನು '7192' ಎಂದು ಸಂಕೇತಿಸಲಾಗಿದೆ ಮತ್ತು 'DASH' ಎಂಬುದನ್ನು '9215' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ 'H' ಎಂಬುದನ್ನು ಹೇಗೆ ಸಂಕೇತಿಸಲಾಗುತ್ತದೆ?

A. 9
B. 5 ✓
C. 2
D. 1

**Q108** General Intelligence & Reasoning

L, M, N, D, E, F ಮತ್ತು G ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಅದೇ ಕ್ರಮದಲ್ಲಿ ಇರಬೇಕಂತೆನಿಲ್ಲ. ಕೇವಲ ಎರಡು ಪೆಟ್ಟಿಗೆಗಳನ್ನು F ನ ಕೆಳಗೆ ಇಡಲಾಗಿದೆ. M ಅನ್ನು ಮೇಲಿನಿಂದ ಮೂರನೆಯ ಸ್ಥಾನದಲ್ಲಿ ಇಡಲಾಗಿದೆ. D ಅನ್ನು L ನ ತಕ್ಷಣದ ಮೇಲೆ ಇಡಲಾಗಿದೆ. E ಅನ್ನು N ನ ಕೆಳಗಿನ ಸ್ಥಾನವೊಂದರಲ್ಲಿ ಇಡಲಾಗಿದೆ, ಆದರೆ G ಯ ಮೇಲಿನ ಸ್ಥಾನವೊಂದರಲ್ಲಿ ಇಡಲಾಗಿದೆ. L ಅನ್ನು M ನ ತಕ್ಷಣದ ಮೇಲೆ ಇಡಲಾಗಿದೆ. ಹಾಗಾದರೆ ಯಾವ ಪೆಟ್ಟಿಗೆಯನ್ನು ಕೆಳಗಿನಿಂದ ಎರಡನೇ ಸ್ಥಾನದಲ್ಲಿ ಇಡಲಾಗಿದೆ?

A. E ✓
B. N
C. G
D. D

**Q109** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'CROW' ಎಂಬುದನ್ನು '9863' ಎಂದು ಸಂಕೇತಿಸಲಾಗಿದೆ ಮತ್ತು 'WORK' ಎಂಬುದನ್ನು '3278' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'K' ಎಂಬುದರ ಸಂಕೇತ ಯಾವುದು?

A. 9
B. 3
C. 2 ✓
D. 8

**Q110** General Intelligence & Reasoning

ಆಂಗ್ಲ ವರ್ಣಮಾಲೆಯ ಅನುಕ್ರಮದ ಪ್ರಕಾರ ಈ ಕೆಳಗೆ ಕೊಟ್ಟಿರುವ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಏನು ಬರಬೇಕು?
XGO FOW NWE VEM ?

A. DMY
B. DNI
C. DMU ✓
D. DUM

**Q111** General Intelligence & Reasoning

A, B, C, D, E, F ಮತ್ತು G ಎಂಬ ಏಳು ಜನರು ಒಂದು ನೇರ ಸಾಲಿನಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದಾರೆ. C ಅವರ ಎಡಕ್ಕೆ ಕೇವಲ ಇಬ್ಬರು ಕುಳಿತಿದ್ದಾರೆ. F ಮತ್ತು E ಅವರ ನಡುವೆ ಕೇವಲ ನಾಲ್ಕು ಜನರು ಕುಳಿತಿದ್ದಾರೆ. B ಅವರು C ಅವರ ಬಲಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. B ಅವರು A ಅವರ ತಕ್ಷಣದ ನೆರೆಹೊರೆಯವರಲ್ಲ. D ಅವರು C ಅವರ ತಕ್ಷಣದ ಬಲಕ್ಕೆ ಕುಳಿತಿದ್ದಾರೆ. F ಅವರು A ಅವರ ತಕ್ಷಣದ ಬಲಕ್ಕೆ ಕುಳಿತಿದ್ದಾರೆ. ಹಾಗಾದರೆ A ಮತ್ತು D ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

A. ಮೂರು
B. ಯಾರೂ ಇಲ್ಲ
C. ಒಂದು
D. ಎರಡು ✓

**Q112** General Intelligence & Reasoning

ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

12 13 15 19 27 ?

A. 43 ✓
B. 44
C. 45
D. 42

**Q113** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ,

'A + B' ಎಂದರೆ 'A ಅವರು B ಅವರ ತಾಯಿ',
'A – B' ಎಂದರೆ' A ಅವರು B ಅವರ ಸಹೋದರ',
'A x B' ಎಂದರೆ 'A ಅವರು B ಅವರ ಹೆಂಡತಿ' ಮತ್ತು
'A ÷ B' ಎಂದರೆ' A ಅವರು B ಅವರ ತಂದೆ'.

ಮೇಲಿನದನ್ನು ಆಧರಿಸಿ, 'A ÷ B – C x D' ಆಗಿದ್ದರೆ, A ಅವರು D ಅವರಿಗೆ ಹೇಗೆ ಸಂಬಂಧಿ?

A. ಸಹೋದರ
B. ತಾಯಿಯ ಸಹೋದರ
C. ಹೆಂಡತಿಯ ತಂದೆ ✓
D. ಹೆಂಡತಿಯ ತಾಯಿ

Blackbook Vocabulary — Now in the App! ▶ Download Now on Google Play

**Q114** General Intelligence & Reasoning

ಒಂದು ವೇಳೆ 'I' ಎಂದರೆ '+', 'J' ಎಂದರೆ '×', 'K' ಎಂದರೆ '÷' ಮತ್ತು 'L' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

198 L 89 I (72 K 2) L 3 J 4 = ?

A. 129

B. 130

C. 133 ✓

D. 142

**Q115** General Intelligence & Reasoning

ಈ ಪ್ರಶ್ನೆಯಲ್ಲಿ, ಪ್ರಶ್ನೆಯ ನಂತರ (I) ಮತ್ತು (II) ಎಂಬ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿ ಮತ್ತು ಸೂಕ್ತವಾದ ಉತ್ತರವನ್ನು ನಿರ್ಧರಿಸಿ.

**ಪ್ರಶ್ನೆ:** E, J, N, C ಮತ್ತು K ಎಂಬ 5 ಕೋಲುಗಳಲ್ಲಿ, ಪ್ರತಿಯೊಂದು ಕೋಲು ವಿಭಿನ್ನ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಗಿಡ್ಡದಾಗಿದೆ?
**ಹೇಳಿಕೆ:** (I) K ಯು C ಗಿಂತ ಹೆಚ್ಚು ಎತ್ತರವಿದೆ.
**ಹೇಳಿಕೆ:** (II) ಕೇವಲ ಒಂದು ಕೋಲು E ಗಿಂತ ಗಿಡ್ಡದಾಗಿದೆ. E ಯು C ಗಿಂತ ಗಿಡ್ಡದಾಗಿದೆ, ಆದರೆ J ಗಿಂತ ಎತ್ತರವಾಗಿದೆ.

A. I ಮತ್ತು II ಎರಡೂ ಹೇಳಿಕೆಗಳು ಒಟ್ಟಾಗಿ (ಮತ್ತು ಹೇಳಿಕೆ 1 ಮಾತ್ರ ಅಥವಾ ಹೇಳಿಕೆ II ಮಾತ್ರ ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ

B. ಹೇಳಿಕೆ II ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ. ✓

C. I ಮತ್ತು IIನೇ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು ಪ್ರಶ್ನೆಯನ್ನು ಉತ್ತರಿಸಲುಸಾಕಾಗುವುದಿಲ್ಲ,

D. ಹೇಳಿಕೆ I ಯಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ II ಯಲ್ಲಿನ ಮಾಹಿತಿಯು ಸಾಕಾಗುವುದಿಲ್ಲ.

**Q116** General Intelligence & Reasoning

ಈ ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಆಯ್ಕೆ ಬರುತ್ತದೆ?

74 75 67 94 30 ?

A. 165

B. 264

C. 246

D. 155 ✓

**Q117** General Intelligence & Reasoning

Refer to the following number, symbol series and answer the question. Counting to be done from left to right only. All numbers are single-digit numbers.
(Left) * £ 8 € @ 1 8 8 © & 1 1 1 7 * 4 7 2 8 $ 8 & (Right)
How many such symbols are there, each of which is immediately preceded by a number and also immediately followed by a number?

A. 4

B. 2 ✓

C. 1

D. 3

**Q118** General Intelligence & Reasoning

IGNITION ಪದದಲ್ಲಿರುವ, ಪ್ರತಿ ಸ್ವರಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣ ಹಿಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣ ಮುಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಹೊಸ ಗುಂಪಿನಲ್ಲಿ ಈ ಕೆಳಗಿನ ಯಾವ ಅಕ್ಷರವು ಎರಡಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳುತ್ತದೆ?

A. U

B. Z

C. O

D. H ✓

**Q119** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'CROW' ಎಂಬುದನ್ನು '7513' ಎಂದು ಸಂಕೇತಿಸಲಾಗಿದೆ ಮತ್ತು 'WORM' ಎಂಬುದನ್ನು '7613' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'M' ಎಂಬುದರ ಸಂಕೇತ ಯಾವುದು?

A. 3

B. 6 ✓

C. 7

D. 1

Blackbook Vocabulary — Now in the App! ► Download Now on Google Play

**Q120** General Intelligence & Reasoning

ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'PACE' ಎಂಬುದನ್ನು '8471' ಎಂದು ಸಂಕೇತಿಸಲಾಗಿದೆ ಮತ್ತು 'CAMP' ಎಂಬುದನ್ನು '7412' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'M' ಎಂಬುದರ ಸಂಕೇತ ಯಾವುದು?

A. 2 ✓

B. 7

C. 1

D. 4

Blackbook Vocabulary — Now in the App! ► Download Now on Google Play
generated by rank.qmaths.in